ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ನವೆಂಬರ್ 20, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 188 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

## ವರ್ಗಾವಣೆ ಆರೋಪ ಸಾಬೀತಾದರೆ ರಾಜಕೀಯ ನಿವೃತ್ತಿ : ಸಿದ್ದರಾಮಯ್ಯ

ಬೆಂಗಳೂರು, ನ. 19 - ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ವರ್ಗಾವಣೆ ಕುರಿತು ಮಾಡಿರುವ ಆರೋಪ ಸಾಬೀತಾದರೆ, ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.



ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಕುಮಾರಸ್ವಾಮಿ ಅವರ ಯಾವುದೇ ಆರೋಪಕ್ಕೂ ದಾಖಲೆಗಳೂ ಇಲ್ಲ, ಆರೋಪವನ್ನು ಸಾಬೀತುಪಡಿಸುವುದೂ ಇಲ್ಲ. ಅವರದ್ದು ಬರೀ 'ಹಿಟ್ ಅಂಡ್ ರನ್' ಎಂದು ದೂರಿದರು.

ಕುಮಾರಸ್ವಾಮಿ ಅವರ ಅವಧಿಯಲ್ಲಿ ವರ್ಗಾವಣೆಗೆ ಹಣ ಪಡೆದಿದ್ದರು. ನಮ್ಮ ಅವಧಿಯಲ್ಲಿ ನಾವು ಹಣ ಪಡೆದಿಲ್ಲ. ಒಂದೇ ಒಂದು ವರ್ಗಾವಣೆಗೆ ಹಣ ಪಡೆದಿರುವುದು ಸಾಬೀತು ಮಾಡಿದರೆ ರಾಜಕೀಯದಿಂದ ನಿವೃತ್ತನಾಗುತ್ತೇನೆ ಎಂದು ಹೇಳಿದ್ದಾರೆ.

ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕಿದೆ. ಕುಮಾರಸ್ವಾಮಿ ಅಥವಾ ಬಿಜೆಪಿಗಿದೆಯಾ? ಆಡಳಿತಾತ್ಮಕ ದೃಷ್ಟಿಯಿಂದ ಅದೊಂದು ಸಹಜ ಪ್ರಕ್ರಿಯೆ. ಇದೊಂದು ದಂಧೆ ಮಾಡಿಕೊಂಡಿದ್ದವರು ಅವರು, ನಾವಲ್ಲ ಎಂದೂ ಅವರು ತಿಳಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸೂಪರ್ ಮುಖ್ಯಮಂತ್ರಿಯಾಗಿ ವರ್ತಿಸುತ್ತಿದ್ದಾರೆ. ವರ್ಗಾವಣೆ ಅವ್ಯವಹಾರ ನಡೆಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದ್ದರು.

## ಅದಾನಿ ಷೇರುಗಳ ತನಿಖೆ ವಿಳಂಬ
### ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲು

ನವದೆಹಲಿ, ನ. 19 - ಅದಾನಿ ಸಮೂಹದ ಷೇರುಗಳ ತಿರುಚುವಿಕೆ ಬಗ್ಗೆ ಕಾಲಮಿತಿಯಲ್ಲಿ ತನಿಖೆ ಮಾಡದ ಮಾರುಕಟ್ಟೆ ನಿಯಂತ್ರಣ ಸೆಬಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ವಿಶಾಲ್ ತಿವಾರಿ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದು, ಸೆಬಿಗೆ ಕಾಲ ಮಿತಿಯಲ್ಲಿ ತನಿಖೆ ನಡೆಸಲು ನ್ಯಾಯಾಲಯ ನಿರ್ದೇಶನ ನೀಡಿತ್ತು. ಆದರೂ, ಸೆಬಿ ವರದಿ ಸಲ್ಲಿಸಿಲ್ಲ ಎಂದು ದೂರಿದ್ದಾರೆ.



ಮೇ 17, 2023ರಲ್ಲಿ ಸೆಬಿಗೆ ನಿರ್ದೇಶನವೊಂದನ್ನು ನೀಡಿದ್ದ ಸುಪ್ರೀಂ ಕೋರ್ಟ್, ಆಗಸ್ಟ್ 14, 2023ರ ಒಳಗೆ ವರದಿ ಸಲ್ಲಿಸುವಂತೆ ತಿಳಿಸಿತ್ತು. ಆಗಸ್ಟ್ 25, 2023ರಲ್ಲಿ ವರದಿ ಸಲ್ಲಿಸಿದ್ದ ಸೆಬಿ, 24 ತನಿಖೆಗಳು ಅಂತಿಮಗೊಂಡಿವೆ. ಇನ್ನೆರಡು ಮಧ್ಯಂತರ ಸ್ವರೂಪದ ವರದಿ ಸಲ್ಲಿಸಿವೆ ಎಂದು ಹೇಳಿತ್ತು.

ಅದಾನಿ ಸಮೂಹಕ್ಕೆ ಸಂಬಂಧಿಸಿದಂತೆ ಹಿಂಡನ್‌ಬರ್ಗ್ ವರದಿ ಪ್ರಕಟವಾದ ನಂತರ ಹೂಡಿಕೆದಾರರು ಸಾವಿರಾರು ಕೋಟಿ ರೂಗಳನ್ನು ಕಳೆದುಕೊಂಡಿದ್ದಾರೆ. ಈಗಿರುವ ನಿಯಂತ್ರಕ (2ನೇ ಪುಟಕ್ಕೆ)

## ರೈಲ್ವೆ ಟಿಕೆಟ್ ಬದಲಾಗುವ ಬೆಲೆಗೆ ಮಮತಾ ಬ್ಯಾನರ್ಜಿ ಟೀಕೆ



ಕೊಲ್ಕೊತಾ, ನ. 19 - ರೈಲ್ವೆ ಟಿಕೆಟ್‌ಗಳಿಗೆ ಬದಲಾಗುವ ಬೆಲೆಯ ಪದ್ಧತಿಯನ್ನು ವಾಪಸ್ ಪಡೆಯಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಮಮತಾ ಬ್ಯಾನರ್ಜಿ ಒತ್ತಾಯಿಸಿದ್ದಾರೆ.

ರೈಲ್ವೆ ಪ್ರಯಾಣ ದರಗಳು ಕೆಲವೊಮ್ಮೆ ವಿಮಾನ ದರಗಳಿಗಿಂತ ಹೆಚ್ಚಾಗಿರುತ್ತವೆ. ಹಬ್ಬದ ಈ ದಿನಗಳಲ್ಲಿ ಕೆಲವು ಮಾರ್ಗಗಳಲ್ಲಿ ಪ್ರಯಾಣ ದರ ಅಪಾರವಾಗಿ ಹೆಚ್ಚಾಗಿದೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

**ಕೆಲವು ಮಾರ್ಗಗಳಲ್ಲಿ ಟಿಕೆಟ್ ದರ ವಿಮಾನ ದರಕ್ಕಿಂತಲೂ ಹೆಚ್ಚು**

ಪ್ರಯಾಣ ದರಗಳನ್ನು ಈ ಮಟ್ಟಕ್ಕೆ ಹೆಚ್ಚಿಸಿದರೆ, ತುರ್ತು ಪರಿಸ್ಥಿತಿಯಲ್ಲಿ ಜನ ಸಾಮಾನ್ಯರು ಏನು ಮಾಡಬೇಕು? ಎಂದು ಬ್ಯಾನರ್ಜಿ ಪ್ರಶ್ನಿಸಿದ್ದಾರೆ.

ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು ಹಾಗೂ ಬೆಲೆ ಕಡಿಮೆ ಮಾಡಬೇಕು. ಸುರಕ್ಷತೆ ಹಾಗೂ ಭದ್ರತೆಯ ವಿಷಯಗಳಿಗೆ ಆದ್ಯತೆ ನೀಡಬೇಕು ಎಂದವರು ಹೇಳಿದ್ದಾರೆ.

2016ರಿಂದ ರೈಲ್ವೆ ಇಲಾಖೆ ಬದಲಾಗುವ ಬೆಲೆ ಪದ್ಧತಿಯನ್ನು ಜಾರಿಗೆ ತಂದಿದೆ. ದೇಶದಲ್ಲಿ ರೈಲ್ವೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿವೆ ಎಂದಿರುವ ಅವರು, ಡಿಕ್ಕಿ ತಪ್ಪಿಸುವ ಉಪಕರಣಗಳ ಅಳವಡಿಕೆ ಹಾಗೂ ಇತರೆ ಕ್ರಮಗಳನ್ನು ಏಕೆ ತೆಗೆದುಕೊಳ್ಳುತ್ತಿಲ್ಲ? ನಾನು ರೈಲ್ವೆ (2ನೇ ಪುಟಕ್ಕೆ)

## ಅಂತಿಮ ಪಂದ್ಯದಲ್ಲಿ 6 ವಿಕೆಟ್‌ಗಳ ಕಹಿ ಸೋಲು

ಅಹಮದಾಬಾದ್, ನ. 19 – ಐ.ಸಿ.ಸಿ. ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತಕ್ಕೆ ನಿರಾಸೆ ಎದುರಾಗಿದ್ದು, ಅಂತಿಮ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಆರು ವಿಕೆಟ್‌ಗಳ ಕಹಿ ಸೋಲು ಎದುರಾಗಿದೆ.

ಇದರಿಂದಾಗಿ ಆಸ್ಟ್ರೇಲಿಯ 6ನೇ ಬಾರಿಗೆ ವಿಶ್ವಕಪ್ ತನ್ನದಾಗಿ ಸಿಕೊಂಡಿತು. ಭಾರತ ಮೂರನೇ ಬಾರಿ ವಿಶ್ವಕಪ್ ಪಡೆಯುವ ಪ್ರಯತ್ನದಲ್ಲಿ ಮುಗ್ಗರಿಸಿತು.

ಮೊದಲು ಬ್ಯಾಟ್ ಮಾಡಿದ ಭಾರತ 10 ವಿಕೆಟ್ ನಷ್ಟಕ್ಕೆ 240 ರನ್ ಗಳಿಸಿತು. ಟ್ರಾವಿಸ್ ಹೆಡ್ ಅವರು 120 ಎಸೆತಗಳಲ್ಲಿ ಗಳಿಸಿದ 137 ರನ್‌ಗಳ ನೆರವಿನಿಂದ, ಆಸ್ಟ್ರೇಲಿಯಾ 43 ಓವರ್‌ಗಳಲ್ಲೇ ಗೆಲುವಿಗೆ ಅಗತ್ಯವಾದ 241 ರನ್ ಗಳಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ, 50 ಓವರ್‌ಗಳಲ್ಲಿ 240 ರನ್ ಮಾತ್ರ ಗಳಿಸಲು ಸಾಧ್ಯವಾಯಿತು.

ಪ್ಯಾಟ್ ಕಮಿನ್ಸ್ ನಾಯಕತ್ವದ


ಆಸ್ಟ್ರೇಲಿಯಾ ಆರನೇ ಬಾರಿ ಚಾಂಪಿಯನ್

ಆಸ್ಟ್ರೇಲಿಯಾ ಆಟಗಾರರು ಬೌಲಿಂಗ್ ಹಾಗೂ ಫೀಲ್ಡಿಂಗ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ನಂತರ ಹೆಡ್ 15 ಬೌಂಡರಿ ಹಾಗೂ ನಾಲ್ಕು ಸಿಕ್ಸರ್ ಸಿಡಿಸುವ ಮೂಲಕ ಭಾರತದ ಬೌಲಿಂಗ್ ಪಡೆಯನ್ನು ಛಿದ್ರಗೊಳಿಸಿದರು. ಮಾರ್ನಸ್ ಲಾಬುಶಗ್ನೆ ಅವರು 110 ಎಸೆತಗಳಲ್ಲಿ ಅಜೇಯ 58 ರನ್ ಗಳಿಸುವ ಮೂಲಕ ಹೆಡ್‌ಗೆ ಜೊತೆಯಾಗಿ ನಿಂತರು.

ಆಸ್ಟ್ರೇಲಿಯಾ ಪರವಾಗಿ ಜೋಶ್ ಹ್ಯಾಜಲ್‌ವುಡ್ ಅವರು 60 ರನ್ ನೀಡಿ ಎರಡು ವಿಕೆಟ್ ಉರುಳಿಸಿದರು. ಮಿಶೆಲ್ ಸ್ಟಾರ್ಕ್ ಅವರು 55 ರನ್‌ಗಳಿಗೆ ಮೂರು ವಿಕೆಟ್ ಉರುಳಿಸಿದರು. ಆರಂಭದಲ್ಲಿ ಉಭಯರು ಲೆಂತ್ ಕಾಯ್ದುಕೊಳ್ಳಲು ವಿಫಲವಾದರು. ನಂತರ ಲಯ ಕಂಡುಕೊಂಡರು.

ಭಾರತದ ಪರವಾಗಿ ರೋಹಿತ್ ಶರ್ಮ 47, ವಿರಾಟ್ ಕೊಹ್ಲಿ 54 ಹಾಗೂ ಕೆ.ಎಲ್. ರಾಹುಲ್ 66 ರನ್ ಗಳಿಸಿದರು. ಆದರೆ, ರಾಹುಲ್ 66 ರನ್ ಗಳಿಸಲು 107 ಎಸೆತಗಳನ್ನು ಎದುರಿಸಿದರು. ಇದರಿಂದಾಗಿ ಅಂತಿಮ ಅಂಕ ಗಳಿಕೆಯಲ್ಲಿ ಹೆಚ್ಚೇನೂ ಪ್ರಯೋಜನವಾಗಲಿಲ್ಲ.

ವಿರಾಟ್ ಕೊಹ್ಲಿ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು. ಟ್ರಾವಿಸ್ ಹೆಡ್ ಅವರು ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

### ಪ್ಯಾಲೆಸ್ತೇನ್ ಪರ ವ್ಯಕ್ತಿಯಿಂದ ವಿಶ್ವಕಪ್ ಭದ್ರತಾ ಉಲ್ಲಂಘನೆ



ಅಹಮದಾಬಾದ್, ನ. 19 - ವಿಶ್ವಕಪ್ ಅಂತಿಮ ಪಂದ್ಯಾವಳಿ ವೇಳೆ ಪ್ಯಾಲೆಸ್ತೇನ್ ಪರ ಅಭಿಯಾನಿಯೋರ್ವ ಬಿಗಿ ಭದ್ರತೆ ಉಲ್ಲಂಘಿಸಿ ಕ್ರಿಕೆಟಿಗ ವಿರಾಟ್ ಕೊಹ್ಲಿ ಅಪ್ಪಿಕೊಳ್ಳಲು ಯತ್ನಿಸಿದ ಘಟನೆ ನಡೆದಿದೆ.

ಮೊದಲ ಪಾನ ವಿರಾಮದ ವೇಳೆ ಈ ಘಟನೆ ನಡೆದಿದೆ. ಈ ವ್ಯಕ್ತಿಯನ್ನು ಭದ್ರತಾ ಸಿಬ್ಬಂದಿ ವಶಕ್ಕೆ ತೆಗೆದುಕೊಂಡಿದ್ದಾರೆ. ಬಂಧಿತನನ್ನು ಚೀನಾ - ಫಿಲಿಪಿನೋ ಮೂಲದ ಆಸ್ಟ್ರೇಲಿಯಾದ ವೇಯ್ನೆ ಜಾನ್ಸನ್ ಎಂದು ಗುರುತಿಸಲಾಗಿದೆ.

ಆತನನ್ನು ಬಂಧಿಸಿ ಚಾಂದ್ ಖೇಡಾ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ.

ಕ್ರಿಕೆಟ್ ಪಂದ್ಯದ ವೇಳೆ ರಾಜಕೀಯ ಘೋಷಣೆ ಕೂಗುವುದು ಅಪರಾಧವಾಗಿದೆ. ಆದರೆ, ಜಾನ್ಸನ್ ವಿದೇಶೀಯನಾಗಿರುವ ಕಾರಣ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂಬುದು ಸ್ಪಷ್ಟವಾಗಿಲ್ಲ.

ಪ್ಯಾಲೆಸ್ತೇನ್ ಬಾವುಟ ವಿನ್ಯಾಸದ ಮಾಸ್ಕ್ ಧರಿಸಿದ್ದ ಜಾನ್ಸನ್, ಘೋಷಣೆಗಳಿರುವ ಟಿ-ಶರ್ಟ್ ಧರಿಸಿದ್ದ.

ಭದ್ರತೆ ಉಲ್ಲಂಘಿಸಲು ಆತ ಯತ್ನಿಸಿದ ನಂತರ ತ್ವರಿತವಾಗಿ ವಶಕ್ಕೆ ತೆಗೆದುಕೊಳ್ಳಲಾಯಿತು.

## ಜಾತಿಗಣತಿ ಬಿಡುಗಡೆಗಾಗಿ ಒತ್ತಾಯಿಸಿ ರಾಜ್ಯಮಟ್ಟದ ಜನಜಾಗೃತಿ ಸಮಾವೇಶ



ದಾವಣಗೆರೆ, ನ. 19- ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಜಾತಿ ಗಣತಿ ಸಮೀಕ್ಷೆ ಬಿಡುಗಡೆ ಮಾಡುವಂತೆ ಒತ್ತಾಯಿಸಿ ನಗರದಲ್ಲಿ ಡಿ. 15 ರಿಂದ 20 ರೊಳಗಾಗಿ ರಾಜ್ಯಮಟ್ಟದ ಜನಜಾಗೃತಿ ಸಮಾವೇಶ ನಡೆಸಲಾಗುವುದು ಎಂದು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಮಾಹಿತಿ ನೀಡಿದರು.

ನಗರದ ರೋಟರಿ ಬಾಲಭವನದಲ್ಲಿ ಇಂದು ಏರ್ಪಾಡಾಗಿದ್ದ ಜಾತಿ ಗಣತಿ ವರದಿ ಬಿಡುಗಡೆ ಕುರಿತ 'ಚಿಂತನ-ಮಂಥನ' ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸರಾಸರಿ ಶೇ. 80 ರಷ್ಟಿರುವ ಅಲ್ಪ ಸಂಖ್ಯಾತ, ಹಿಂದುಳಿದ, ದಲಿತ ವರ್ಗಗಳು ಸ್ವತಂತ್ರ ಭಾರತದಲ್ಲಿ 75 ವರ್ಷಗಳ ನಂತರವೂ ಸಹ ಸಾಮಾಜಿಕ, ಶೈಕ್ಷಣಿಕ,

**'ಚಿಂತನ-ಮಂಥನ' ಸಭೆಯಲ್ಲಿ ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಎ.ಬಿ. ರಾಮಚಂದ್ರಪ್ಪ**

ಆರ್ಥಿಕವಾಗಿ ನ್ಯಾಯ ಸಿಗದೇ ಅವಕಾಶ ಗಳಿಂದ ವಂಚಿತವಾಗಿವೆ ಎಂದರು.

ರಾಜ್ಯದಲ್ಲಿನ ಸರ್ವ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳನ್ನು ಅರಿಯಲು 2013-18 ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿದ್ದ ಸಿದ್ಧರಾಮಯ್ಯ ಅವರು ಹಿಂದುಳಿದ ವರ್ಗಗಳ ಆಯೋಗದ ಮೂಲಕ 162 ಕೋಟಿ ರೂ. ವ್ಯಯಿಸಿ ಮನೆ, ಮನೆ ಸಮೀಕ್ಷೆಯನ್ನು ನಡೆಸಿದ್ದರು. ಆದರೆ ಇದುವರೆಗೂ ಆ ಸಮೀಕ್ಷಾ ವರದಿಯನ್ನು ಅಂಗೀಕರಿಸಿ, ಸಾರ್ವಜನಿಕ ವಾಗಿ ಬಿಡುಗಡೆ ಮಾಡಿರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರದ ಮೇಲೆ ಒತ್ತಡ ತರುವ ನಿಟ್ಟಿನಲ್ಲಿ ದಾವಣಗೆರೆಯಲ್ಲಿ ರಾಜ್ಯಮಟ್ಟದ ಜನಜಾಗೃತಿ ಸಮಾವೇಶ ಆಯೋಜಿಸಲಾಗುವುದು. ಈ ಸಂಬಂಧ ಇನ್ನೂ 3-4 ಪೂರ್ವ ಸಿದ್ಧತಾ ಸಭೆಗಳನ್ನು ನಡೆಸಲಾಗುವುದು ಎಂದು ಹೇಳಿದರು.

ವಾಲ್ಮೀಕಿ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ ಮಾತನಾಡಿ, ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಸಮಾಜದವರೆಲ್ಲರೂ ಒಗ್ಗಟ್ಟಾಗಬೇಕಾದ ಅಗತ್ಯವಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅಹಿಂದದ ಯಾವುದೇ ಅಭ್ಯರ್ಥಿಗೆ ಟಿಕೆಟ್ ನೀಡಿದರೂ ಒಂದಾಗಿ ಕೆಲಸ ಮಾಡೋಣ (3ನೇ ಪುಟಕ್ಕೆ)

## ಹಿರಿಯರ ನೆಮ್ಮದಿ ಜೀವನದ ನಡುವೆ ಕಿರಿಯರ ತಳಮಳ



ನವದೆಹಲಿ, ನ. 18 - ನೀವು ನಾಯಕನಾಗಿ ಸಾವನ್ನಪ್ಪುತ್ತೀರಿ, ಇಲ್ಲವೇ ದೀರ್ಘ ಕಾಲ ಬದುಕಿ ನೀವೇ ಖಳನಾಗುವುದನ್ನು ನೋಡುತ್ತೀರಿ ಎಂದು 'ದಿ ಡಾರ್ಕ್ ನೈಟ್' ಚಿತ್ರದಲ್ಲಿ ಮಾತೊಂದು ಬರುತ್ತದೆ. ಸದ್ಯಕ್ಕೆ ಜಪಾನ್‌ನ ಹಿರಿಯ ನಾಗರಿಕರು ಈ ಮಾತನ್ನು ನೆನಪಿಸಿಕೊಳ್ಳಬಹುದು. ಏಕೆಂದರೆ ಅಲ್ಲಿನ ಯುವ ಪೀಳಿಗೆ, ಹಿರಿಯ ನಾಗರಿಕರ ಬಗ್ಗೆ ದಿನೇ ದಿನೇ ಅಸಹನೆ ಹೆಚ್ಚಿಸಿಕೊಳ್ಳುತ್ತಿದೆ.

20ನೇ ಶತಮಾನದಲ್ಲಿ ಬಲಿಷ್ಠ ಜಪಾನ್ ನಿರ್ಮಿಸಿದ ಹಿರಿಯ ಪೀಳಿಗೆ, 21ನೇ ಶತಮಾನದಲ್ಲಿ ಕಿರಿಯರ ಜೊತೆ ಸಂಘರ್ಷ ನಡೆಸುವಂತಾಗಿದೆ ಎಂದು ಆಸ್ಟ್ರೇಲಿಯಾದ ನ್ಯಾಷನಲ್ ಯೂನಿವರ್ಸಿಟಿಯ ಜಪಾನ್ ಇತಿಹಾಸ ತಜ್ಞರಾಗಿರುವ ಸೈಮನ್ ಎವೆನೆಲ್ ಹೇಳಿದ್ದಾರೆ.

ಅಂದ ಹಾಗೆ ಈ ಹಿರಿಯ ಪೀಳಿಗೆ ಅಂತಿಂಥದ್ದೇನೂ ಅಲ್ಲ. ಎರಡನೇ ವಿಶ್ವ ಸಮರದಲ್ಲಿ ಜಪಾನ್ ತೀವ್ರ ಮುಖಭಂಗಕ್ಕೀಡಾಗಿತ್ತು. ಕೇವಲ ಯುದ್ಧದಲ್ಲಷ್ಟೇ ಅಲ್ಲ, ನೈತಿಕವಾಗಿಯೂ ಮುಖಭಂಗ ಅನುಭವಿಸಿತ್ತು. ನಂತರದ ದಶಕಗಳಲ್ಲಿ ಇಡೀ ಜಪಾನ್ ಪರಿವರ್ತನೆಯಾಯಿತು. ಯುದ್ಧಾನಂತರದ ಎರಡು ದಶಕಗಳಲ್ಲಿ ಜನಿಸಿದವರು, ಪ್ರಪಂಚವೇ ನಿಬ್ಬೆರಗಾಗುವಂತೆ ದೇಶವನ್ನು ಕಟ್ಟಿದರು.

ಇವರ ಪರಿಶ್ರಮದಿಂದ 1950ರಿಂದ 1970ರ ನಡುವೆ ದೇಶದ ಬೆಳವಣಿಗೆ ದರ ನಿರಂತರವಾಗಿ ಎರಡಂಕಿಯ ಮಟ್ಟದಲ್ಲಿತ್ತು. ಹದಿಹರೆಯದಲ್ಲೇ ಶಿಕ್ಷಣ ಪೂರ್ಣಗೊಳಿಸಿದ ಇವರು, ಜಪಾನಿನ ಭಾರೀ ಕೈಗಾರಿಕೆ, ರಾಸಾಯನಿಕ, ಆಟೋಮೊಬೈಲ್ ಹಾಗೂ ಎಲೆಕ್ಟ್ರಾನಿಕ್

**ಜಪಾನ್ ವೃದ್ಧಾಪ್ಯ ತಂದ ಪೀಳಿಗೆ ಸಂಘರ್ಷ**

ಉದ್ಯಮಗಳಲ್ಲಿ ಕ್ರಾಂತಿಯನ್ನೇ ತಂದರು.

ಈ ಪೀಳಿಗೆ ಕೇವಲ ಉತ್ಪಾದನೆಯಷ್ಟೇ ಅಲ್ಲದೇ ಹೊಸ ಸಂಗೀತ ಹಾಗೂ ಕಲೆಗೂ ದಾರಿ ಕಂಡುಕೊಂಡಿತು. ಜಪಾನಿನ ಆಗಿನ ಕಾಲದ ನಟರು ಜಾಗತಿಕ ವೇದಿಕೆಯಲ್ಲೂ ಮಿಂಚಿದರು.

1970ರ ವೇಳೆ ಉಂಟಾದ ಭಾರೀ ತೈಲ ಬೆಲೆ ಏರಿಕೆಯ ಸಮಸ್ಯೆಗಳನ್ನು ಮೆಟ್ಟಿ ನಿಂತು ಕೈಗಾರಿಕಾ ಬೆಳವಣಿಗೆ ಮುಂದುವರೆಸುವಲ್ಲಿ ಇವರ ಪರಿಶ್ರಮ ಅಸಾಧಾರಣ. ಆಗಿನ ಯುವ ಪೀಳಿಗೆ ನಂತರದ ದಿನಗಳಲ್ಲಿ ಜಪಾನ್‌ನ ಕಾರ್ಪೊರೇಟ್ ಹಾಗೂ ಕೈಗಾರಿಕಾ ದಿಗ್ಗಜರೂ ಆದರು.

ಜಪಾನಿನ ಮಹಿಳೆಯರೂ ದೇಶದ ಬೆಳವಣಿಗೆಯಲ್ಲಿ ಸಮಾನ ಭಾಗಿದಾರರು. ಗೃಹಿಣಿಯರೂ ಸಹ ಮನೆಗಳ ನಿರ್ವಹಣೆಯ ಮುಂಚೂಣಿಯಲ್ಲಿದ್ದರು. ಮುಂದಿನ ಪೀಳಿಗೆಯ ನಾಗರಿಕರನ್ನು ಸಶಕ್ತವಾಗಿ ಬೆಳೆಸಿದರು. ಇದ ರಿಂದಾಗಿ ಜಪಾನ್ ಬೆಳೆಯುವ (3ನೇ ಪುಟಕ್ಕೆ)

## ಉತ್ತರಾಖಂಡ : ಸುರಂಗದಲ್ಲಿ ಸಿಲುಕಿದವರ ರಕ್ಷಣೆಗೆ 5 ಮಾರ್ಗ

ನವದೆಹಲಿ, ನ. 19 – ಉತ್ತರಾಖಂಡದ ಹೆದ್ದಾರಿಯ ಸುರಂಗದಲ್ಲಿ ಸಿಲುಕಿರುವ 41 ಕಾರ್ಮಿಕರ ರಕ್ಷಣೆಗಾಗಿ ಸರ್ಕಾರ ಐದು ಮಾರ್ಗಗಳ ಯೋಜನೆ ರೂಪಿಸಿದೆ. ಕಾರ್ಮಿಕರನ್ನು ರಕ್ಷಿಸಲು ಬದ್ಧವಾಗಿದ್ದೇವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕಳೆದ ಎಂಟು ದಿನಗಳಿಂದ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ಆದರೂ ಕಾರ್ಮಿಕರನ್ನು ಹೊರ ತರಲು ಸಾಧ್ಯವಾಗಿಲ್ಲ.

ಕಾರ್ಯಾಚರಣೆ ಕುರಿತು ಮಾಹಿತಿ ನೀಡಿರುವ ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿ ಅನುರಾಗ್ ಜೈನ್, ಕಾರ್ಮಿಕರಿಗೆ ಮಲ್ಟಿ ವಿಟಮಿನ್, ಆಂಟಿ ಡಿಪ್ರೆಸೆಂಟ್ ಹಾಗೂ ಡ್ರೈ ಫ್ರೂಟ್‌ಗಳನ್ನು ಕಳಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಐದು ಆಯ್ಕೆಗಳ ಬಗ್ಗೆ ನಿರ್ಧರಿಸಲಾಗಿದೆ. ಐದು ಬೇರೆ ಬೇರೆ ಸಂಸ್ಥೆಗಳು ಈ ಆಯ್ಕೆಗಳನ್ನು ಜಾರಿಗೆ ತರುತ್ತಿವೆ. ರಕ್ಷಣಾ ಕಾರ್ಯದಲ್ಲಿ ಒ.ಎನ್.ಜಿ.ಸಿ., ಸಟ್ಲೆಜ್ ಜಲ ವಿದ್ಯುತ್ ನಿಗಮ, ರೈಲ್ ವಿಕಾಸ್ ನಿಗಮ, ರಾಷ್ಟ್ರೀಯ ಹೆದ್ದಾರಿ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ತೆಹ್ರಿ ಜಲ ಅಭಿವೃದ್ಧಿ ನಿಗಮಗಳು ತೊಡಗಿವೆ ಎಂದವರು ಹೇಳಿದ್ದಾರೆ.

ಉತ್ತರಕಾಶಿಯಿಂದ 30 ಕಿ.ಮೀ. ದೂರದಲ್ಲಿರುವ ಹೆದ್ದಾರಿಯಲ್ಲಿ ನಿರ್ಮಿಸಲಾಗುತ್ತಿದ್ದ ಸುರಂಗ ಕುಸಿದಿದೆ. ಕಳೆದ ಭಾನುವಾರ ಬೆಳಿಗ್ಗೆ 5.30ಕ್ಕೆ ಸುರಂಗ ಕುಸಿದಿತ್ತು. ನಂತರದಿಂದಲೂ ರಕ್ಷಣಾ ಕಾರ್ಯಾಚರಣೆಗೆ ಹಲವಾರು ಅಡ್ಡಿಗಳು ಎದುರಾಗುತ್ತಿವೆ.

ರೈಲು ವಿಕಾಸ ನಿಗಮವು ಲಂಬವಾಗಿ ಕೊಳವೆ ಮಾರ್ಗ ಕಲ್ಪಿಸಿ ಅಗತ್ಯ ವಸ್ತುಗಳ ಪೂರೈಸುವಲ್ಲಿ ತೊಡಗಿದೆ. ಗಡಿ ರಸ್ತೆಗಳ (2ನೇ ಪುಟಕ್ಕೆ)

## ದೇವಸ್ಥಾನಗಳು ನೆಮ್ಮದಿ ನೀಡುವ ಕೇಂದ್ರಗಳು

ದಾವಣಗೆರೆ, ನ.19- ಜೀವನದ ಜಂಜಾಟದಲ್ಲಿ ಬೇಸತ್ತಿರುವ ಮನಗಳಿಗೆ ದೇವಾಲಯಗಳು ನೆಮ್ಮದಿಯ ಕೇಂದ್ರಗಳಾಗಿವೆ ಎಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕುರ್ಕಿ ಗ್ರಾಮದಲ್ಲಿ ಭಾನುವಾರ ಸದ್ಗುರು ಶಿರಡಿ ಸಾಯಿಬಾಬಾ ಮಂದಿರದಲ್ಲಿ ಪ್ರಸಾದ ನಿಲಯದ ಶಂಕುಸ್ಥಾಪನೆ, ಕಾರ್ತಿಕೋತ್ಸವ ಮತ್ತು 5ನೇ ವರ್ಷದ ವಾರ್ಷಿಕೋತ್ಸವ ಹಾಗೂ ಗುರು ವಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಿನನಿತ್ಯ ದುಡಿಮೆ ಮಾಡಿಕೊಂಡು ಬಸವಳಿದು ಬರುವ ರೈತರಿಗೆ ಈ ಶಿರಡಿ ಸಾಯಿಬಾಬಾ ಮಂದಿರ ನೆಮ್ಮದಿ ನೀಡುವ ಕೇಂದ್ರವಾಗಿದೆ. ಈ ಮಂದಿರದಲ್ಲಿ ಒಂದು ಗಂಟೆ ಧ್ಯಾನ ಮಾಡಿದರೆ ಮನಸ್ಸಿಗೆ ನೆಮ್ಮದಿ ಸಿಗಲಿದೆ ಎಂದರು.

ಪ್ರತಿವರ್ಷ ಶಿರಡಿ ಸಾಯಿಬಾಬಾ ಅವರ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರದ್ಧಾಭಕ್ತಿಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ಸುತ್ತಮುತ್ತಲ ಭಕ್ತರು ಶಿರಡಿ ಸಾಯಿಬಾಬಾ ಮಂದಿರಕ್ಕೆ ಬಂದು ಸಾಯಿಬಾಬಾನ ದರ್ಶನ ಪಡೆದು ಅವರ ಇಷ್ಟಾರ್ಥಗಳನ್ನು ಈಡೇರಿಸಿಕೊಂಡು ಹೋಗುತ್ತಿದ್ದಾರೆ. ಇದೊಂದು ಉತ್ತಮ



**ಶಾಸಕ ಬಸವಂತಪ್ಪ**

ಕಾರ್ಯವಾಗಿದೆ ಎಂದು ತಿಳಿಸಿದರು.

ಇತ್ತೀಚೆಗೆ ತಂದೆ-ತಾಯಿಗಳನ್ನು ವೃದ್ಧಾಶ್ರಮಗಳಿಗೆ ಸೇರಿಸುವ ಸಂಖ್ಯೆ ಹೆಚ್ಚಾಗುತ್ತಿವೆ. ಇದಕ್ಕೆ ರೈತರು, ಬಡವರಲ್ಲ. ಶಿಕ್ಷಣ ಪಡೆದ ಸುಶಿಕ್ಷಿತರು, ಉನ್ನತ ಹುದ್ದೆಗಳಲ್ಲಿರುವ ಅಧಿಕಾರಿಗಳು, ಸಂಪತ್ತು ಹೊಂದಿರುವ ಶ್ರೀಮಂತರು ಹೆತ್ತ ತಂದೆ-ತಾಯಿಗಳನ್ನು ಬೀದಿಗಟ್ಟುವುದನ್ನು ನಾವು ಇಂದು ನೋಡುತ್ತಿದ್ದೇವೆ. ಹೀಗಾಗಿ ಭಕ್ತರು ದೇವಸ್ಥಾನಗಳಿಗೆ ಬಂದು ಎಷ್ಟು ಶ್ರದ್ಧಾಭಕ್ತಿಯಿಂದ ದೇವರನ್ನು ನೆನೆಯುತ್ತೀರೋ ಅದೇ ರೀತಿ ಮನೆಯಲ್ಲಿರುವ ತಂದೆ-ತಾಯಿಗಳನ್ನು ದೇವರಂತೆ ನೆನೆದು ಚೆನ್ನಾಗಿ ನೋಡಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಹಾವೇರಿ ಜಿಲ್ಲೆ ಗುತ್ತಲ ಕಲ್ಮಠದ ಶ್ರೀಗುರುಸಿದ್ದ ಮಹಾಸ್ವಾಮಿಗಳು, ಕೋಣಂದೂರು ಶ್ರೀಶೈಲ ಶಾಖಾ ಮಠದ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಈ ವೇಳೆ ಶ್ರೀ ಕೇಸರಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಎ.ಜಿ.ನಾಗಪ್ಪ ಅಧ್ಯಕ್ಷತೆ (3ನೇ ಪುಟಕ್ಕೆ)

## ದೇಶದ ಆರ್ಥಿಕತೆ 4 ಟ್ರಿಲಿಯನ್ ಡಾಲರ್‌ಗೆ ತಲುಪಿದೆಯೇ ?

ನವದೆಹಲಿ, ನ. 19 - ಭಾರತದ ಆರ್ಥಿಕತೆಯ ಗಾತ್ರ 4 ಟ್ರಿಲಿಯನ್ ಡಾಲರ್ ದಾಟಿದೆಯೇ? ಈ ಬಗ್ಗೆ ಕೇಂದ್ರ ಸರ್ಕಾರ ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ಆದರೆ, ಉದ್ಯಮಿಗಳಾದ ಗೌತಮ್ ಅದಾನಿ, ಇಬ್ಬರು ಕೇಂದ್ರ ಸಚಿವರು ಹಾಗೂ ಮಹಾ ರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ದೇಶದ ಆರ್ಥಿಕತೆಯ ಗಾತ್ರ 4 ಶತಕೋಟಿ ಡಾಲರ್ ದಾಟಿದೆ ಎಂದು ಸಂತೋಷ ವ್ಯಕ್ತಪಡಿಸಿದ್ದಾರೆ.

**ಅದಾನಿ, ಸಚಿವರ ಅಭಿನಂದನೆ, ಕೇಂದ್ರದ ಮೌನ**

ಭಾರತದ ಆರ್ಥಿಕತೆಯ ಗಾತ್ರ 4 ಟ್ರಿಲಿಯನ್ ಡಾಲರ್ ದಾಟಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ವೈರಲ್ ಆಗಿದೆ. ಕೇಂದ್ರ ಹಣಕಾಸು ಸಚಿವಾಲಯ ಹಾಗೂ ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿಗಳು ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

ವೈರಲ್ ಆಗಿರುವ ಸುದ್ದಿ ತಪ್ಪಾಗಿದೆ. ಭಾರತ ಇನ್ನೂ ಈ ಗುರಿ ತಲುಪಿಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ.

ಐ.ಎಂ.ಎಫ್. ಮಾಹಿತಿ ಆಧರಿಸಿ ಎಲ್ಲ ದೇಶಗಳ ಜಿ.ಡಿ.ಪಿ. ಅನ್ನು ನೇರವಾಗಿ ದಾಖಲಿಸಿಕೊಂಡಿರುವುದು ಎನ್ನಲಾದ ವೆಬ್ ತಾಣವೊಂದರ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಇದನ್ನು ಬಿಜೆಪಿಯ ಹಿರಿಯ ನಾಯಕರೂ ಹಂಚಿಕೊಂಡಿದ್ದಾರೆ. ಈ ರೀತಿ ಜಿ.ಡಿ.ಪಿ. ನೇರ ಮಾಹಿತಿ ದಾಖಲಿಸುವುದು ಕಠಿಣವಾಗಿದೆ. ಹಲವಾರು ಆರ್ಥಿಕ ವಲಯಗಳಿಂದ ಮಾಹಿತಿ ಬರುವುದು ವಿಳಂಬವಾಗುತ್ತದೆ.

ಆದರೂ, ಈ ಚಿತ್ರವನ್ನು ಸಾಮಾಜಿಕ (2ನೇ ಪುಟಕ್ಕೆ)

# ಗುಣಮಟ್ಟದ ಆರೋಗ್ಯ ಎಲ್ಲರ ಹಕ್ಕು : ಸಂಸದ ಸಿದ್ದೇಶ್ವರ



**ಜಿಎಂಎಚ್ ಚಾರಿಟಿ ಫೌಂಡೇಶನ್ ವತಿಯಿಂದ ನ್ಯಾಮತಿಯಲ್ಲಿ ಯಶಸ್ವಿ ಉಚಿತ ವೈದ್ಯಕೀಯ ಶಿಬಿರ**

ದಾವಣಗೆರೆ, ನ. 19 - ಜಿ. ಮಲ್ಲಿಕಾರ್ಜುನಪ್ಪ ಮತ್ತು ಶ್ರೀಮತಿ ಹಾಲಮ್ಮ ಚಾರಿಟಿ ಫೌಂಡೇಶನ್ ಭೀಮಸಮುದ್ರ ಮತ್ತು ಸಿಟಿ ಸೆಂಟ್ರಲ್ ಹಾಸ್ಪಿಟಲ್, ನೇತ್ರಾಲಯ, ಲಯನ್ಸ್ ಕ್ಲಬ್ ಆಸರೆ ಇವರುಗಳ ಸಹಯೋಗದಲ್ಲಿ ಬೃಹತ್ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ನ್ಯಾಮತಿಯ ಮಹಾಂತೇಶ್ವರ ಕಲ್ಯಾಣ ಮಂಟಪದಲ್ಲಿ ಮೊನ್ನೆ ನಡೆಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮಾತನಾಡಿ, ಬಡವರು ಮತ್ತು ನಿರ್ಗತಿಕರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಸುಲಭವಾಗಿ ಪಡೆಯಲು ಸಹಾಯ ಮಾಡುವ ಮಾನವ ಪ್ರಯತ್ನದ ಮುಂದುವರಿಕೆಯಲ್ಲಿ ಜಿ. ಮಲ್ಲಿಕಾರ್ಜುನಪ್ಪ ಮತ್ತು ಶ್ರೀಮತಿ ಹಾಲಮ್ಮ ಚಾರಿಟಿ ಫೌಂಡೇಶನ್ ಸದಾ ಮುಂಚೂಣಿಯಲ್ಲಿದೆ ಎಂದು ಹೇಳಿದರು. ಗುಣಮಟ್ಟದ ಆರೋಗ್ಯ ಎಲ್ಲರ ಹಕ್ಕು, ಆರೋಗ್ಯವೇ ಭಾಗ್ಯ, ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿದೆ ಎಂದು ಹೇಳಿದರು.

ಅತಿಥಿಯಾಗಿದ್ದ ಜಿ.ಎಸ್. ಅನಿತ್ ಕುಮಾರ್ ಮಾತನಾಡಿ, ಸುಮಾರು 6 ನುರಿತ ವೈದ್ಯಕೀಯ ತಜ್ಞರುಗಳಿಂದ ವೈದ್ಯಕೀಯ ಪರೀಕ್ಷೆಗಳು ನಡೆಯುತ್ತಿದ್ದು, ಅಗತ್ಯವುಳ್ಳ ರೋಗಿಗಳಿಗೆ ಉಚಿತ ಔಷಧಿಗಳನ್ನು ವಿತರಿಸಲಾಗುವುದು. ಅಗತ್ಯತೆ ಕಂಡು ಬಂದಲ್ಲಿ ಉಚಿತವಾಗಿ ಆಪರೇಷನ್ ಟ್ರಸ್ಟ್ ವತಿಯಿಂದ ನೋಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಚಾರಿಟಿ ಫೌಂಡೇಶನ್ ವತಿಯಿಂದ ಸದಸ್ಯ ಪ್ರಭುದೇವ್, ಸಂಯೋಜಕ ಟಿ. ಆರ್. ತೇಜಸ್ವಿ ಕಟ್ಟಿಮನಿ ಮತ್ತಿತರರು ಉಪಸ್ಥಿತರಿದ್ದರು.

# ಆಯುರ್ವೇದ ದೀರ್ಘ ಆಯುಷ್ಯದ ವಿಜ್ಞಾನ

## 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯಲ್ಲಿ ವಿಜ್ಞಾನಿ ಎಂ.ಜಿ ಬಸವನಗೌಡ



ದಾವಣಗೆರೆ, ನ.19- ಆಯುರ್ವೇದವು ಜೀವನ ಮತ್ತು ದೀರ್ಘಾಯುಷ್ಯದ ವಿಜ್ಞಾನವಾಗಿದ್ದು, ವೈದ್ಯಕೀಯ ಪದ್ಧತಿಯಲ್ಲಿ ಅದ್ವಿತೀಯ ಮತ್ತು ಅಳಿಸಲಾಗದ ಚಿಕಿತ್ಸಾ ವಿಧಾನವೆಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ ಬಸವನಗೌಡ ಅಭಿಪ್ರಾಯಪಟ್ಟರು.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಸುಶ್ರುತ ಆಯುರ್ವೇದ ವೈದ್ಯಕೀಯ ಕಾಲೇಜ್ ಮತ್ತು ಸಂಶೋಧನಾ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಕಳೆದ ವಾರ ನಡೆದ 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯಲ್ಲಿ 'ಔಷಧಿ ಸಸ್ಯಗಳ ಪರಂಪರೆ' ಕುರಿತು ಅವರು ಉಪನ್ಯಾಸ ನೀಡಿದರು.

ಪ್ರಾಚೀನ ಭಾರತದ ಕಾಲದಿಂದಲೂ ಆಯುರ್ವೇದ ಪದ್ಧತಿ ನಮ್ಮಲ್ಲಿ ಜಾರಿಯಿದ್ದು, ಮಾರಕ ರೋಗಗಳು ಆಯುರ್ವೇದ ಪದ್ಧತಿಯಿಂದ ವಾಸಿಯಾಗಿವೆ. ಇಂದು ವಿಪರೀತ ವಿಷಯುಕ್ತ ಆಹಾರ ಸೇವನೆಯಿಂದ ದೇಹದಲ್ಲಿ ನಿರೋಧಕ ಶಕ್ತಿ ಕುಂದುತ್ತಿದೆ. ಈ ಸಂದರ್ಭದಲ್ಲಿ ಆಹಾರದಲ್ಲಿ ಸ್ಥಳೀಯ ಔಷಧಿ ಗುಣಗಳುಳ್ಳ ಸಸ್ಯಗಳನ್ನು ಬಳಸುವುದರಿಂದ ದೇಹದಲ್ಲಿ ಚೈತನ್ಯ ಹೆಚ್ಚುವುದಲ್ಲದೇ ರೋಗದಿಂದ ಮುಕ್ತಿ ಹೊಂದಬಹುದು.

ಭಾರತವು ವೈದ್ಯಕೀಯ ಸಸ್ಯಗಳ ಕಣಜವಾಗಿದ್ದು, ಸುಮಾರು 7,000 ಕ್ಕೂ ಹೆಚ್ಚು ಪ್ರಭೇದಗಳು ನಮ್ಮಲ್ಲಿವೆ. ಇವುಗಳ ಬಳಕೆ ಮತ್ತು ಸಂಶೋಧನೆ ನಮ್ಮಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಾದರೆ ಆಯುರ್ವೇದ ಪದ್ಧತಿ ಮುನ್ನೆಲೆಗೆ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್ ದೇವರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದು ನಗರದಲ್ಲಿ ಬೀದಿಗೊಂದು ಔಷಧಿ ಅಂಗಡಿ ಮತ್ತು ಆಸ್ಪತ್ರೆಯನ್ನು ತೆರೆಯಲಾಗುತ್ತಿದೆ. ಇದು ಸಮಾಜಕ್ಕೆ ಒಳಿತಲ್ಲ, ಯುವ ಜನತೆ ಉತ್ತಮ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ ಹೊಂದಬಹುದೆಂದು ಕರೆ ನೀಡಿದರು.

ಸುಶ್ರುತ ಆಯುರ್ವೇದ ಕಾಲೇಜಿನ ಉಪನ್ಯಾಸಕಿ ಡಾ. ಹೇಮಶ್ರೀ, ವಿವಿಧ ಚಿಕಿತ್ಸಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ವಿಜ್ಞಾನಿಗಳಾದ ಬಿ.ಓ. ಮಲ್ಲಿಕಾರ್ಜುನ, ಜೆ. ರಘುರಾಜ, ಡಾ. ಜಿ.ಕೆ ಜಯದೇವಪ್ಪ, ಹೆಚ್. ಎಂ. ಸಣ್ಣಗೌಡ್ರ, ಡಾ. ಟಿ.ಜಿ. ಅವಿನಾಶ್ ಹಾಗೂ ಇತರರು ಭಾಗವಹಿಸಿದ್ದರು.

# ಮುಂಚೂಣಿ ಪ್ರಾತ್ಯಕ್ಷಿಕೆ : ರಾಗಿಯಲ್ಲಿ ಅಲ್ಪಾವಧಿ ತಳಿ ಕೆಎಂಆರ್ -630



ದಾವಣಗೆರೆ, ನ. 19 - ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಯ ತರಬೇತಿಯನ್ನು ಬಿದರಿಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ ಬಿ. ಓ. ಮಾತನಾಡಿ, ರಾಗಿಯನ್ನು ನೀರಾವರಿ ಮೂಲಕ ಬೆಳೆಯುವುದಾದರೆ ಅಲ್ಪಾವಧಿ ತಳಿಗಳನ್ನು ಬಳಸುವುದು ಸೂಕ್ತ. ವಿಸಿ ಫಾರ್ಮ್ ಮಂಡ್ಯ, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಇವರು ಬಿಡುಗಡೆ ಮಾಡಿರುವ ಅಲ್ಪಾವಧಿ ತಳಿಯಾದ ಕೆಎಂಆರ್ 630 ಬಗ್ಗೆ ಮಾಹಿತಿ ಒದಗಿಸಿದರು.

ಜೈವಿಕ ಗೊಬ್ಬರಗಳಾದ ಅಚೋಸ್ಪಿರಿಲಾಂ ಹಾಗೂ ರಂಜಕ ಕರಗಿಸುವ ಗೊಬ್ಬರವನ್ನು ಪ್ರತಿ ಎಕರೆ ಬೀಜಕ್ಕೆ 200 ಗ್ರಾಂ ನಂತೆ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರದ ಬಳಕೆಯನ್ನು ಹತ್ತರಷ್ಟು ಕಡಿಮೆ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ಡಾ. ಟಿ. ಜಿ. ಅವಿನಾಶ್ ಸಸ್ಯ ಸಂರಕ್ಷಣಾ ತಜ್ಞರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ರಾಗಿ ಬೆಳೆಯಲ್ಲಿ ಲದ್ದಿ ಉಳುವಿನ ಬಾಧೆ ಕಂಡು ಬಂದಲ್ಲಿ ಎಮಾಮೆಕ್ಟಿನ್ ಬೆಂಝೋಯೆಟ್ 0.4 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಾತ್ಯಕ್ಷಿಕೆ ರೈತರಿಗೆ ಹೊಸ ತಳಿಯ ಬಿತ್ತನೆ ಬೀಜ ಹಾಗೂ ಜೈವಿಕ ಗೊಬ್ಬರಗಳನ್ನು ಒದಗಿಸಲಾಯಿತು.

# ಶೃತಿ ಇನಾಮ್ದಾರ್‌ಗೆ ಗೌರವ ಡಾಕ್ಟರೇಟ್



ಹರಿಹರ, ನ.19- ವಿಶ್ವ ಮಾನವ ಹಕ್ಕುಗಳ ರಕ್ಷಣಾ ಆಯೋಗವು ಇಲ್ಲಿನ ಬೆಳ್ಳೂಡಿ ಚಂದ್ರಗುಪ್ತ ಮೌರ್ಯ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕರಾದ ಶೃತಿ ಇನಾಮ್ದಾರ್ ಅವರಿಗೆ ಗೌರವ ಡಾಕ್ಟರೇಟ್ ಜೊತೆಗೆ ಆಯೋಗದ ಸಕ್ರಿಯ ಸದಸ್ಯತ್ವವನ್ನೂ ನೀಡಿದೆ.

# ಅದಾನಿ ಷೇರುಗಳ ತನಿಖೆ ವಿಳಂಬ

**(1ನೇ ಪುಟದಿಂದ)** ದಕ್ಷವಾಗಿದೆಯೇ ಅಥವಾ ಹೊಸ ನಿಯಂತ್ರಕ ವ್ಯವಸ್ಥೆಯ ಅಗತ್ಯವಿದೆಯೇ? ಎಂಬ ಪ್ರಶ್ನೆ ಈಗ ಮೂಡಿದೆ ಎಂದೂ ಅರ್ಜಿದಾರರು ಹೇಳಿದ್ದಾರೆ. ಕಂಪನಿಗಳ ವರ್ತನೆ ಹಾಗೂ ಪದ್ಧತಿಗಳ ಮೇಲೆ ನಿಗಾ ವಹಿಸಲು ಬಲಿಷ್ಠ ವ್ಯವಸ್ಥೆಯ ಅಗತ್ಯವಿದೆ. ಕಂಪನಿಗಳು ನಿಯಂತ್ರಕಗಳು ರೂಪಿಸಿರುವ ನಿಯಮ ಹಾಗೂ ನಿರ್ಬಂಧಗಳನ್ನು ಪಾಲಿಸುತ್ತಿವೆಯೇ ಎಂಬ ಬಗ್ಗೆಯೂ ಪರಿಶೀಲಿಸಬೇಕಿದೆ ಎಂದು ಅರ್ಜಿದಾರರು ತಿಳಿಸಿದ್ದಾರೆ.

# ಸತ್ಯ, ಸರಳತೆ, ಸೇವೆ, ತ್ಯಾಗಗಳ ಸಂಗಮ ಗಾಂಧೀಜಿ: ಭಿಕ್ಷಾವರ್ತಿ ಮಠ

ದಾವಣಗೆರೆ, ನ. 19- ಗಾಂಧೀಜಿ ಸರಳ ಜೀವನದ ಉದಾತ್ತ ಚಿಂತಕ, ಸತ್ಯ, ಸಾಕ್ಷಾತ್ಕಾರ ಇವರ ಬದುಕಿನ ಉದ್ದೇಶ. ಸರಳ ಜೀವನವನ್ನು ತಮ್ಮ ಸಾಮಾಜಿಕ, ಕೌಟುಂಬಿಕ, ಆರ್ಥಿಕ ಸೇರಿದಂತೆ ಎಲ್ಲಾ ರಂಗಗಳಲ್ಲೂ ಅಳವಡಿಸಿಕೊಂಡಿದ್ದರು. ಸತ್ಯ, ಸರಳತೆ, ಸೇವೆ, ತ್ಯಾಗಗಳ ಸಂಗಮವೇ ಗಾಂಧೀಜಿ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ. ಭಿಕ್ಷಾವರ್ತಿ ಮಠ ಹೇಳಿದರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಗಾಂಧಿ ಚಿಂತನೆಗಳ ಪ್ರಸ್ತುತತೆ' ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಾಂಧಿ ಯುದ್ಧ ವಿರೋಧಿಯಾಗಿದ್ದರು. ಯುದ್ಧಕ್ಕೆ ಪ್ರಮುಖ ಕಾರಣ ಧರ್ಮವನ್ನು ಅರ್ಥ ಮಾಡಿಕೊಳ್ಳದಿರುವುದು. ಧರ್ಮ ಧೈರ್ಯವಂತನಿಗೆ ಹೇಡಿಗಲ್ಲ. ರಕ್ತ ಸುರಿಸುವುದು ಧರ್ಮವಲ್ಲ. ಧರ್ಮದ ತಿರುಳು ತ್ಯಾಗ ಮತ್ತು ಸೇವೆ ಎಂಬ ನಿಲುವು ಗಾಂಧೀಜಿಯ ಪ್ರಾಣ, ತ್ರಾಣವಾಗಿತ್ತು ಎಂದರು.

ಪ್ರೊ.ಎಂ. ಬಸವರಾಜ್ ಮಾತನಾಡಿ, ಅಹಿಂಸೆ ಮತ್ತು ಶತ್ರುವನ್ನು ಪ್ರೀತಿಸಬೇಕು. ಯಾವುದನ್ನು ಒಟ್ಟಿಗೆ ಇಟ್ಟುಕೊಳ್ಳುವುದೋ ಅದೇ ಧರ್ಮ ಎಂದು ಆಚರಿಸಿದರು ಎಂದು ತಿಳಿಸಿದರು.

ಟ್ರಸ್ಟ್ ಸಂಸ್ಥಾಪಕ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಗಾಂಧೀಜಿ ಇಂದಿಗೂ, ಎಂದಿಗೂ ಪ್ರಸ್ತುತ. ಅವರ ವಿಚಾರಗಳು ವಿಶ್ವದ ಶಾಶ್ವತ ಸತ್ಯಗಳು. ಗಾಂಧಿಯವರ ಸತ್ಯ, ಬ್ರಹ್ಮಚರ್ಯೆ, ಅಹಿಂಸೆ, ಆಸ್ತೇಯ, ಅಪರಿಗ್ರಹ, ಶರೀರಶ್ರಮ, ಅಸ್ವಾದ, ಅಭಯ, ಸರ್ವಧರ್ಮ ಸಮಾನತ್ವ, ಸ್ವದೇಶಿ, ಅಸ್ಪೃಶ್ಯತಾ ನಿವಾರಣೆ ಇವುಗಳು ಎಲ್ಲಾ ದೇಶಗಳಿಗೂ, ಎಲ್ಲಾ ಧರ್ಮಗಳಿಗೂ ಪ್ರಸ್ತುತ ಎಂದರು.

ಚಿಂತನ-ಮಂಥನದಲ್ಲಿ ಹೆಚ್.ಕೆ. ಕೊಟ್ರಪ್ಪ, ನಿಜಗುಣ, ರಾಮನಗೌಡ, ಕುಸಗೂರು, ಗುರುಮೂರ್ತಿ, ಮಲ್ಲಾಬಾದಿ ಬಸವರಾಜ ಮುಂತಾದವರಿದ್ದರು.

# ಕೊಂಡಜ್ಜಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜಿಲ್ಲಾಧಿಕಾರಿ ಭೇಟಿ : ಪರಿಶೀಲನೆ



ಹರಿಹರ, ನ. 19- ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅವರು ಕೊಂಡಜ್ಜಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಇಂದು ಅನಿರೀಕ್ಷಿತ ಭೇಟಿ ನೀಡಿ ಸಿಬ್ಬಂದಿ ಹಾಜರಾತಿ ಪುಸ್ತಕ, ಔಷಧ ಉಗ್ರಾಣ, ಆಸ್ಪತ್ರೆಯ ಸ್ವಚ್ಛತೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಷಣ್ಮುಖಪ್ಪ, ಡಾ. ಶಶಿಕಲಾ, ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಅಂಬಿಕಾ, ತಿಪ್ಪೇಸ್ವಾಮಿ, ಪ್ರತಿಭಾ, ಪೊಲೀಸ್ ನವೀನ್ ಬೆಳ್ಳೂಡಿ ಇತರರು ಹಾಜರಿದ್ದರು.

# ಕುಲ ಕುಲವೆಂದು ಹೊಡೆದಾಡದಿರಿ, ಮಾನವರೆಲ್ಲಾ ಒಂದೇ

## ಉಚ್ಚಂಗಿದುರ್ಗದ ಕಾರ್ಯಕ್ರಮದಲ್ಲಿ ಶ್ರೀ ರೇವಣಸಿದ್ದ ಸ್ವಾಮೀಜಿ



ಹರಪನಹಳ್ಳಿ, ನ. 19- ತಾಲ್ಲೂಕಿನ ಉಚ್ಚಂಗಿದುರ್ಗ ಗ್ರಾಮದಲ್ಲಿ ನೂತನವಾಗಿ ಕಟ್ಟಿಸಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಉದ್ಘಾಟನೆ ಹಾಗೂ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪೂಜೆಯನ್ನು ನೆರವೇರಿಸಿದ ರಾಜಗುರು ಕಟ್ಟಿಮನೆ ಶ್ರೀ ರೇವಣಸಿದ್ಧ ಮಹಾ ಸ್ವಾಮಿಗಳು ಮಾತನಾಡಿ, ಎಲ್ಲರ ಆಚಾರ, ವಿಚಾರದಲ್ಲಿ ಬೇರೆ ಬೇರೆ ಇರಬಹುದು ಆದರೆ ಮನುಷ್ಯರಲ್ಲಿ ಅತೀ ಆಸೆ ಇರಬಾರದು. ಅತೀ ಆಸೆ ದುಃಖಕ್ಕೆ ಮೂಲ ಎಂದರು.

ಕಳ ಬೇಡ, ಕೊಲ ಬೇಡ ,ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಅಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮ ದೇವನೊಲಿಸುವ ಪರಿ ಎಂದು ಬಸವಣ್ಣನವರು 12 ನೇ ಶತಮಾನದಲ್ಲಿಯೇ ಹೇಳಿದ್ದಾರೆ. ನಾವೆಲ್ಲರೂ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಪಾಲಿಸೋಣ, ಕುಲ ಕುಲವೆಂದು ಹೊಡೆದಾಡ ಬೇಡಿ ಮಾನವರೆಲ್ಲ ಒಂದೇ ಎಂದು ಹೇಳಿದರು.

ಇನ್‌ಸೈಟ್ಸ್ ಐಎಎಸ್ ತರಬೇತಿ ಸಂಸ್ಥೆಯ ಸಂಸ್ಥಾಪಕ ಬಿ.ಜಿ. ವಿನಯ್ ಕುಮಾರ್ ಮಾತನಾಡಿ, ಗುಡಿ ಕಟ್ಟುವುದು ಮುಖ್ಯವಲ್ಲ, ದಾರ್ಶನಿಕರ ತತ್ವ, ಸಿದ್ಧಾಂತಗಳನ್ನು ಪಾಲಿಸಬೇಕು. ದೇವಸ್ಥಾನಕ್ಕೆ ಖರ್ಚು ಮಾಡುವಷ್ಟು ಮಕ್ಕಳ ವಿದ್ಯಾಭ್ಯಾಸಕ್ಕೆ ಹತ್ತು ಪಟ್ಟು ಖರ್ಚು ಮಾಡಬೇಕು, ಓದಿ ಉನ್ನತ ಹುದ್ದೆಗೆ ಹೋದರೆ, ನಮ್ಮ ಸಮಾಜ ಮುಂದೆ ಬರಲು ಸಾಧ್ಯ ಎಂದು ಪ್ರತಿಪಾದಿಸಿದರು.

ಈ ಸಂದರ್ಭದಲ್ಲಿ ಶಿವಕುಮಾರ್ ಸ್ವಾಮಿ, ಸಿದ್ದಣ್ಣ, ಕಮಲವ್ವರ ಹನುಮಂತಪ್ಪ, ಶಿಕ್ಷಕ ಚಂದ್ರಪ್ಪ, ಮಡ್ರಳ್ಳಿ ಕೆಂಚಪ್ಪ, ಯುವರಾಜ್, ರೇವಣಪ್ಪ, ಹಾಲೇಶಪ್ಪ, ಕಂತೆಪ್ಪರ ಹನುಮಂತಪ್ಪ, ಶಿವಕುಮಾರ್, ಶರತ್ ಮತ್ತು ಇತರರು ಹಾಜರಿದ್ದರು.

# ನಾಲ್ಕು ಟ್ರಿಲಿಯನ್ ಡಾಲರ್‌ಗೆ ತಲುಪಿದೆಯೇ?

**(1ನೇ ಪುಟದಿಂದ)** ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಡಲಾಗುತ್ತಿದೆ.

ಕೇಂದ್ರ ಸಚಿವರಾದ ಗಜೇಂದ್ರ ಸಿಂಗ್ ಶೆಖಾವತ್ ಹಾಗೂ ಸಂಪುಟ ಸಚಿವ ಜಿ. ಕಿಶನ್ ರೆಡ್ಡಿ ಅವರೂ ಈ ಚಿತ್ರವನ್ನು ಹಂಚಿಕೊಂಡಿದ್ದಾರೆ.

# ಹರಿಹರದಲ್ಲಿ ಇಂದು ಮಹಿಳಾ ವಿಚಾರ ಗೋಷ್ಠಿ



ಶ್ರೀ ಎಂ.ಪಿ. ಗುರುಸಿದ್ದಸ್ವಾಮಿ ಸಭಾಂಗಣದಲ್ಲಿ ಎಸ್.ಜೆ.ವಿ.ಪಿ. ಮಹಾವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಐಕ್ಯೂಎಸಿ ಅಡಿಯಲ್ಲಿ ಹಾಗೂ ಸ್ಫೂರ್ತಿ ಪ್ರಕಾಶನ (ತೆಲಿಗಿ - ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಶ್ರೀಶೈಲ ಜಗದ್ಗುರುಗಳವರ 51ನೇ ಜನ್ಮ ದಿನ ಹಾಗೂ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಇಂದು ಬೆಳಿಗ್ಗೆ 10.30ಕ್ಕೆ ಮಹಿಳಾ ವಿಚಾರ ಗೋಷ್ಠಿ ನಡೆಯಲಿದೆ.

ಜ.ಪಂ.ವಿ. ವಿದ್ಯಾಪೀಠದ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ ಹಾಗೂ ಕಾರ್ಯದರ್ಶಿ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ ಅವರ ಗೌರವ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಪದ್ಮಶ್ರೀ ಪುರಸ್ಕೃತರಾದ ಡಾ. ಬಿ. ಮಂಜಮ್ಮ ಜೋಗತಿ ಆಗಮಿಸುವರು.

ಹರಿಹರ ಎಸ್.ಜೆ.ವಿ.ಪಿ. ಮಹಾವಿದ್ಯಾಲಯದ ಪ್ರಾಚಾರ್ಯ ಎನ್.ಹೆಚ್. ಶಿವಗಂಗಮ್ಮ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಕೆ.ಹೆಚ್. ಗಾಯತ್ರಿ, ಎಂ. ಪೂರ್ಣಿಮಾ, ಶ್ರೀಮತಿ ಅಶ್ವಿನಿ ಕೃಷ್ಣ, ಎಂ. ಬಸವರಾಜ್, ಎಸ್.ಎಂ. ಮಲ್ಲಮ್ಮ ನಾಗರಾಜ್, ಎಸ್.ಜಿ. ಶಾರದಮ್ಮ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು. ಕೆ.ಎಸ್. ವೀರಭದ್ರಪ್ಪ ತೆಲಿಗಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ರಮೇಶ್ ಪರ್ವತಿ ಪ್ರಾಸ್ತಾವಿಕ ನುಡಿಗಳನ್ನಾಡುವರು.

# ಸುರಂಗದಲ್ಲಿ ಸಿಲುಕಿದವರ ರಕ್ಷಣೆಗೆ 5 ಮಾರ್ಗ


**(1ನೇ ಪುಟದಿಂದ)** ಸಂಘಟನೆಯು ನೆರವಿಗಾಗಿ ಮತ್ತೊಂದು ಮಾರ್ಗ ರೂಪಿಸುತ್ತಿದೆ ಎಂದು ಜೈನ್ ಹೇಳಿದ್ದಾರೆ.

ತೆಹ್ರಿ ಹೈಡ್ರೋಎಲೆಕ್ಟ್ರಿಕ್ ಅಭಿವೃದ್ಧಿ ನಿಗಮವು ಬಾರಕೋಟ್ ಕಡೆಯಿಂದ ಕಾಳವೆ ಮಾರ್ಗದ ಕಾರ್ಯ ನಡೆಸಲಿದೆ ಎಂದವರು ಹೇಳಿದ್ದಾರೆ. ಎಲ್ಲಾ ಕೇಂದ್ರೀಯ ಸಂಸ್ಥೆಗಳ ನೆರವು ಕಾರ್ಯಾಚರಣೆಗೆ ಎನ್.ಹೆಚ್.ಐ.ಡಿ.ಸಿ. ಎಲ್.ನ ವ್ಯವಸ್ಥಾಪಕ ನಿರ್ದೇಶಕ ಮಹಮೂದ್ ಅಹಮದ್ ಅವರನ್ನು ಸಂಚಾಲಕ ಉಸ್ತುವಾರಿಯಾಗಿ ನೇಮಿಸಲಾಗಿದೆ.

ಈ ನಡುವೆ, ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ರಕ್ಷಣಾ ಕಾರ್ಯಾಚರಣೆಯ ಪರಿಶೀಲನೆ ನಡೆಸಿದ್ದಾರೆ.

ಶುಕ್ರವಾರದಂದು ತೊಡಕುಗಳು ಎದುರಾದ ಕಾರಣ, ರಕ್ಷಣೆಗಾಗಿ ಕೊಳವೆ ಮಾರ್ಗ ರೂಪಿಸುವ ಕಾರ್ಯ ಸ್ಥಗಿತಗೊಳಿಸಲಾಗಿತ್ತು. ಸೋಮವಾರದಂದು ಈ ಕಾರ್ಯ ಪುನರಾರಂಭಿಸಲು ಸಿದ್ಧತೆ ನಡೆಸಲಾಗುತ್ತಿದೆ.


**ಅಣಬೇರು ಗ್ರಾಮದ ಕೆ.ಎಂ. ಪರ್ವತಪ್ಪ ನಿಧನ**



ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದ ವಾಸಿ

**ಶ್ರೀ ಕೆ.ಎಂ. ಪರ್ವತಪ್ಪ**

(ಮಾಜಿ ಅಧ್ಯಕ್ಷರು, ಗ್ರಾಮ ಪಂಚಾಯತಿ, ಅಣಬೇರು)

ಇವರು, ದಿನಾಂಕ 19.11.2023ರ ಭಾನುವಾರ ಬೆಳಿಗ್ಗೆ 12.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 88 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.11.2023ರ ಸೋಮವಾರ ಮಧ್ಯಾಹ್ನ 12ಕ್ಕೆ ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬವರ್ಗ**

**ಮೊ : 91803 22449, 97438 24237**


# ಬೆಲೆಗೆ ಮಮತಾ ಬ್ಯಾನರ್ಜಿ ಟೀಕೆ

**(1ನೇ ಪುಟದಿಂದ)** ಸಚಿವೆಯಾಗಿದ್ದಾಗ ಈ ರೀತಿಯ ಕ್ರಮಗಳಿಗೆ ಚಾಲನೆ ನೀಡಲಾಗಿತ್ತು ಎಂದವರು ಹೇಳಿದ್ದಾರೆ. ಛಾತ್ ಹಬ್ಬದ ಹಿನ್ನೆಲೆಯಲ್ಲಿ ಬಿಹಾರ ಹಾಗೂ ಜಾರ್ಖಂಡ್ ಸಂಪರ್ಕಿಸುವ ರೈಲ್ವೆ ಟಿಕೆಟ್‌ಗಳ ದರ ಗಗನಮುಖಿಯಾಗಿರುವ ಬಗ್ಗೆ ಆಕ್ಷೇಪಗಳು ವ್ಯಕ್ತವಾಗಿವೆ. ಹಬ್ಬಗಳ ಹಿನ್ನೆಲೆಯಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ನಡುವೆ ರೈಲ್ವೆ 6,754 ಹೆಚ್ಚುವರಿ ರೈಲ್ವೆ ಪ್ರಯಾಣಗಳಿಗೆ ವ್ಯವಸ್ಥೆ ಮಾಡಲಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 2,614 ಹೆಚ್ಚುವರಿ ರೈಲು ಪ್ರಯಾಣಕ್ಕೆ ವ್ಯವಸ್ಥೆ ಮಾಡಲಾಗಿತ್ತು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

# ಗುತ್ತೂರು ಅಂಗನವಾಡಿ ಕೇಂದ್ರಕ್ಕೆ ಉಪವಿಭಾಗಾಧಿಕಾರಿ ಭೇಟಿ, ಪರಿಶೀಲನೆ

ಹರಿಹರ, ನ.19- ಗುತ್ತೂರು ಅಂಗನವಾಡಿ ಕೇಂದ್ರಕ್ಕೆ ಜಿಲ್ಲಾ ಉಪವಿಭಾಗಾಧಿಕಾರಿ ದುರ್ಗಾಶ್ರೀ ಅವರು ನಿನ್ನೆ ಭೇಟಿ ಕೊಟ್ಟು ಶಾಲೆಯಲ್ಲಿರುವ ಮಕ್ಕಳ ಯೋಗಕ್ಷೇಮ ವಿಚಾರಿಸಿ, ಕಡತಗಳನ್ನು ಪರಿಶೀಲನೆ ನಡೆಸಿದರು.

ಈ ವೇಳೆ ಶಾಲಾ ಮಕ್ಕಳಿಗೆ ಹಾಕಿರುವ ಸಮವಸ್ತ್ರ ಹಾಗೂ ಶಾಲೆಯ ಆವರಣದಲ್ಲಿ ಹಸಿರಿನಿಂದ ಕೂಡಿದ ಗಿಡ ಮರಗಳು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಗುಣಮಟ್ಟದ ಆಹಾರ, ಸ್ವಚ್ಚತೆ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಶಿಶು ಅಭಿವೃದ್ಧಿ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ವಾಸಂತಿ ಉಪ್ಪಾರ್, ತಾಲ್ಲೂಕು ಅಧಿಕಾರಿ ಪೂರ್ಣಿಮಾ, ಮೇಲ್ವಿಚಾರಕರಾದ ಮಂಜುಳಾ, ವಿ.ಎ. ಪ್ರಭು, ಅಂಗನವಾಡಿ ಶಿಕ್ಷಕಿ ಬಿ.ಎಸ್. ನಿರ್ಮಲ, ಸಹಾಯಕಿ ನೇತ್ರಾವತಿ ಹಾಗು ಇತರರು ಹಾಜರಿದ್ದರು.



# ಹರಪನಹಳ್ಳಿ: 30 ರಂದು ಕನಕದಾಸರ ಜಯಂತಿ



ಹರಪನಹಳ್ಳಿ, ನ.19- ದಾಸ ಶ್ರೇಷ್ಠ ಭಕ್ತ ಕನಕದಾಸರ 536ನೇ ಜಯಂತಿಯನ್ನು ನ.30 ರಂದು ಪಟ್ಟಣದ ತಾಲ್ಲೂಕು ಪಂಚಾಯ್ತಿ ಸಾಮರ್ಥ್ಯ ಸೌಧದಲ್ಲಿ ತಾಲ್ಲೂಕು ಆಡಳಿತದಿಂದ ಆಚರಿಸಲಾಗುವುದು ಎಂದು ತಹಶೀಲ್ದಾರ್ ಗಿರೀಶ್ ಬಾಬು ತಿಳಿಸಿದರು.

ಪಟ್ಟಣದ ಮಿನಿವಿಧಾನ ಸೌಧದ ಸಭಾಂಗಣದಲ್ಲಿ ನಡೆದ ಕನಕದಾಸರ ಜಯಂತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಹರಿಹರ ಸರ್ಕಲ್ ವೃತ್ತದಿಂದ ತಾಲ್ಲೂಕು ಪಂಚಾಯ್ತಿವರೆಗೂ ಕನಕದಾಸರ ಭಾವಚಿತ್ರದೊಂದಿಗೆ ವಿವಿಧ ಕಲಾತಂಡಗಳಿಂದ ಮೆರವಣಿಗೆ ನಡೆಯಲಿದೆ ಬಳಿಕ ಸಾಮಾರ್ಥ್ಯ ಸೌಧದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದರು.

ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮಾಜದ ತಲಾ ಮೂರು ವಿದ್ಯಾರ್ಥಿಗಳನ್ನು ತಾಲ್ಲೂಕು ಆಡಳಿತದಿಂದ ಸನ್ಮಾನಿಸಿ ಗೌರವಿಸಲಾಗುವುದು ಮತ್ತು ಕನಕದಾಸರ ಜೀವನ ಚರಿತ್ರೆ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ, ವಕೀಲ ಗೋಣಿಬಸಪ್ಪ, ವಿವಿಧ ಇಲಾಕೆಯ ಅಧಿಕಾರಿಗಳು ಉಪಸ್ಥಿತರಿದ್ದರು.


**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಹರಿಹರ ತಾಲ್ಲೂಕು ಹಿಂಡಸಘಟ್ಟ ಗ್ರಾಮದ ವಾಸಿ
**ಶ್ರೀಮತಿ ಕರಿಬಸಮ್ಮ ಕೋಂ ಶ್ರೀ ಎಂ. ಹೆಚ್. ಹನುಮಗೌಡ್ರು ಮತ್ತು ಸಹೋದರರು**
ಮಾಡುವ ವಿಜ್ಞಾಪನೆಗಳು.
ದಿನಾಂಕ 16.11.2023ನೇ ಗುರುವಾರ ರಾತ್ರಿ 12.10ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶರಣೆ ಶ್ರೀಮತಿ ಗಂಗಮ್ಮ ಮಲ್ಲಿಗೇನಹಳ್ಳಿ**
(ಶ್ರೀ ದಿ. ಹನುಮಂತಪ್ಪ ಮಲ್ಲಿಗೇನಹಳ್ಳಿ ಇವರ ಧರ್ಮಪತ್ನಿ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ದಿನಾಂಕ 20.11.2023ನೇ ಸೋಮವಾರ ರಾತ್ರಿ **ಶಿವ ಭಜನೆ** ಹಾಗೂ
ದಿನಾಂಕ 21.11.2023ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ **ಶಿವಗಣಾರಾಧನೆಯನ್ನು**
**ಹಿಂಡಸಘಟ್ಟ ಗ್ರಾಮದ ಮೃತರ ಸ್ವಗೃಹದಲ್ಲಿ** ಹಮ್ಮಿಕೊಳ್ಳಲಾಗಿದೆ.
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುವ.

**ದುಃಖತಪ್ತರು : ಶ್ರೀಮತಿ ಕರಿಬಸಮ್ಮ ಕೋಂ ಎಂ.ಹೆಚ್. ಹನುಮಗೌಡ್ರು ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು.**
**ಶ್ರೀಮತಿ ಬಸಮ್ಮ ಕೋಂ ಶ್ರೀ ಎಂ.ಹೆಚ್. ಗದ್ದಿಗೆಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು.**
**ಶ್ರೀಮತಿ ಪಾರ್ವತಮ್ಮ ಕೋಂ ಶ್ರೀ ಮರಿಬಸಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಗೋವಿನಹಾಳು ಮತ್ತು ಪರುಳ್ಳಿ ವಂಶಸ್ಥರು**
**ಶ್ರೀಮತಿ ಸವಿತಾ ಕೋಂ ಶ್ರೀ ಎಂ.ಹೆಚ್. ಮಹೇಶ್ವರಪ್ಪ ಮತ್ತು ಮಕ್ಕಳು. ಶ್ರೀಮತಿ ಅನಿತಾ ಕೋಂ ಶ್ರೀ ಎಂ. ಹೆಚ್. ಬಸವರಾಜ ಮತ್ತು ಮಕ್ಕಳು**
**ಮಲ್ಲಿಗೇನಹಳ್ಳಿ ವಂಶಸ್ಥರು, ಕೊಳ್ಳೇರ ವಂಶಸ್ಥರು ಹಾಗೂ ಹಿಂಡಸಘಟ್ಟ ಗ್ರಾಮಸ್ಥರು ಮತ್ತು ಬಂಧು-ಮಿತ್ರರು.**

**ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.**


# ಜಿಗಳಿ ಹಾ.ಉ.ಸ.ಸಂಘದ ಕಟ್ಟಡ ಕಾಮಗಾರಿಗೆ ಧರ್ಮಸ್ಥಳದಿಂದ ನೆರವು



ಮಲೇಬೆನ್ನೂರು, ನ. 19- ಜಿಗಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಡಾ. ವೀರೇಂದ್ರ ಹೆಗ್ಗಡೆ ಅವರು ಮಂಜೂರು ಮಾಡಿದ 2 ಲಕ್ಷ ರೂ. ಗಳ ಡಿಡಿಯನ್ನು ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಅವರು ಸಂಘದ ಅಧ್ಯಕ್ಷ ಜಿ.ಎಂ. ವೀರನಗೌಡ ಅವರಿಗೆ ನೀಡಿದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿದರು.ಗ್ರಾಮದ ಮುಖಂಡ ಗೌಡ್ರ ಬಸವರಾಜಪ್ಪ, ಸಂಘದ ಉಪಾಧ್ಯಕ್ಷೆ ಶ್ರೀಮತಿ ಹೇಮಾವತಿ, ಗ್ರಾ.ಪಂ. ಸದಸ್ಯ ಡಿ.ಎಂ. ಹರೀಶ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಪಿ. ಹನುಮಗೌಡ, ಪತ್ರಕರ್ತ ಪ್ರಕಾಶ್, ಧರ್ಮಸ್ಥಳ ಯೋಜನೆಯ ಮೇಲ್ವಿಚಾರಕ ಹರೀಶ್, ಸೇವಾ ಪ್ರತಿನಿಧಿಗಳಾದ ಮಮತಾ, ನಾಗರತ್ನ, ಎ. ಒಕ್ಕೂಟದ ಅಧ್ಯಕ್ಷ ಎಂ.ಬಿ. ರುದ್ರಗೌಡ, ಉಪಾಧ್ಯಕ್ಷ ನಾಗಸನಹಳ್ಳಿ ಬಸವರಾಜ್, ಬಿ ಒಕ್ಕೂಟದ ಅಧ್ಯಕ್ಷ ವಿ.ಡಿ. ಕೃಷ್ಣ, ವಿಜಯ ಭಾಸ್ಕರ್, ಹಾ.ಸ.ಸಂಘದ ಕಾರ್ಯದರ್ಶಿ ಎಂ. ಶಿವಾನಂದಪ್ಪ, ಸಹಾಯಕ ಎಂ.ಎನ್. ರುದ್ರೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಮಹತ್ವ ಕಳೆದುಕೊಳ್ಳುತ್ತಿರುವ ಪ್ರಾದೇಶಿಕ ಭಾಷೆಗಳು



**ಕೊಟ್ಟೂರಿನ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ರಾಜ್ಯಾಧ್ಯಕ್ಷ ನಾಡೋಜ ಡಾ.ಮನು ಬಳಿಗಾರ್ ವಿಷಾದ**

ಕೊಟ್ಟೂರು, ನ.19- ಹಿಂದಿ, ಇಂಗ್ಲಿಷ್ ಭಾಷೆಗಳ ಅಬ್ಬರದಲ್ಲಿ ಪ್ರಾದೇಶಿಕ ಭಾಷೆಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ ಎಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ರಾಜ್ಯಾಧ್ಯಕ್ಷ ನಾಡೋಜ ಡಾ.ಮನು ಬಳಿಗಾರ್ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಕೊಟ್ಟೂರೇಶ್ವರ ಮಹಾವಿದ್ಯಾಲಯದಲ್ಲಿ ಕನ್ನಡೋತ್ಸವ, ಕನ್ನಡ ನಾಡು- ನುಡಿ ಚಿಂತನೆಯ ವಿಶೇಷ ಕಾರ್ಯಕ್ರಮ 'ಕನ್ನಡ ಸಂಭ್ರಮ-50' ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ನಾಡು, ನುಡಿಗೆ ಸಂಬಂಧಿಸಿದ ಇಂತಹ ವಿಶೇಷ ಕಾರ್ಯಕ್ರಮಗಳು ನಿರಂತರವಾಗಿ ಸಾಗಬೇಕು, ಕನ್ನಡ ಭಾಷೆ, ಕನ್ನಡ ಮಾಧ್ಯಮದ ಶಾಲೆಗಳನ್ನು ಉಳಿಸಿ ಬೆಳೆಸಬೇಕು. ಕನ್ನಡದಲ್ಲಿ ಓದಿದ ಎಲ್ಲರಿಗೂ ಸಹ ಉದ್ಯೋಗಾವಕಾಶಗಳು ಹೆಚ್ಚಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಎರಡು ಸಾವಿರ ವರ್ಷಗಳಿಗಿಂತ ಹಳೆಯದಾದ ನಮ್ಮ ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುವುದು ವಿದ್ಯಾರ್ಥಿಗಳ ಹಾಗೂ ಎಲ್ಲಾ ಕನ್ನಡಿಗರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕಾದಂಬರಿಕಾರ ಕುಂ. ವೀರಭದ್ರಪ್ಪ ಮಾತನಾಡಿ, ಕನ್ನಡದಲ್ಲಿ ನಗಿಸಿ, ಕನ್ನಡದಲ್ಲೇ ಸಂಭ್ರಮಿಸಿ, ಕನ್ನಡವೇ ಪರಮ ಶ್ರೇಷ್ಠ ಎಂದು ಕನ್ನಡ ಮಾಧ್ಯಮದಲ್ಲಿ ಓದಿ, ಮನುಷ್ಯ ಸಂಬಂಧಗಳನ್ನು ಬೆಸೆವ ಏಕೈಕ ಭಾಷೆ ಅದುವೇ ಕನ್ನಡ ಭಾಷೆಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿದ್ದರಾಮ ಕಲ್ಮಠ ಮಾತನಾಡಿ, ಕನ್ನಡ ಭಾಷೆ ಉಳಿದರೆ ಕನ್ನಡದ ಸಂಸ್ಕೃತಿ ಉಳಿಯುತ್ತದೆ. ಹಾಗಾಗಿ ಎಲ್ಲರೂ ಕನ್ನಡ ಭಾಷೆಯನ್ನು, ಕನ್ನಡದ ಪುಸ್ತಕಗಳನ್ನು ನಿರಂತರವಾಗಿ ಓದುವಂತಾಗಿ, ಕನ್ನಡ ನಾಡು- ನುಡಿ ಸೇವೆಗಾಗಿ ನಾವೆಲ್ಲ ಸದಾ ಸಿದ್ಧರಾಗಿರಬೇಕು ಎಂದರು.

ನಿಕಟಪೂರ್ವ ಜಿಲ್ಲಾ ಕಾರ್ಯದರ್ಶಿ ಎಂಪಿಎಂ ಮಂಜುನಾಥ್ ಹೆಚ್. ಬಿ. ಹಳ್ಳಿ ಮಾತನಾಡಿದರು. ಪ್ರಾಚಾರ್ಯ ಡಾ.ಎಂ ರವಿಕುಮಾರ್ ಸ್ವಾಗತಿಸಿದರು, ಟಿ.ರೇವಣ್ಣ ವಂದಿಸಿದರು. ವಿಜಯಲಕ್ಷ್ಮಿ ಸಜ್ಜನ್ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಎಸ್.ಎಂ. ಗುರುಪ್ರಸಾದ್, ಅಡಿಕೆ ಮಂಜುನಾಥಯ್ಯ, ಕೋರಿ ಬಸವರಾಜ್, ಡಿ. ಎಸ್. ಶಿವಮೂರ್ತಿ, ಕೆ.ಬಿ. ಮಲ್ಲಿಕಾರ್ಜುನಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ರಾಜ್ಯಮಟ್ಟದ ಜನಜಾಗೃತಿ ಸಮಾವೇಶ

(1ನೇ ಪುಟದಿಂದ) ಎಂದು ಸಲಹೆ ನೀಡಿದರು.

**ಕಾಂತರಾಜ ವರದಿ ಬಿಡುಗಡೆಗೆ ಸಭೆಯಲ್ಲಿ ನಿರ್ಣಯ**

ಯಾವುದೇ ಒತ್ತಡಗಳಿಗೆ ಮಣಿಯದೇ ಕೂಡಲೇ ಕಾಂತರಾಜ್ ವರದಿಯನ್ನು ಅಂಗೀಕರಿಸಿ, ಸಾರ್ವಜನಿಕವಾಗಿ ಬಿಡುಗಡೆ ಮಾಡುವಂತೆ ಮುಖ್ಯ ಮಂತ್ರಿಯನ್ನು ಒತ್ತಾಯಿಸಲು ಸಭೆಯಲ್ಲಿ ಸೇರಿದ್ದ 25ಕ್ಕೂ ಹೆಚ್ಚು ಅಹಿಂದ ಸಮುದಾಯಗಳ ಮುಖಂಡರ ಸಮ್ಮುಖದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ನಿವೃತ್ತ ಎಸ್ಪಿ ಎನ್. ರುದ್ರಮುನಿ ಮಾತನಾಡಿ, ಅಹಿಂದ ಸಮುದಾಯಗಳು ಒಗ್ಗಟ್ಟಾಗಲು ಪ್ರಯತ್ನಿಸುತ್ತಿರುವುದು ಸಂತಸದ ಸಂಗತಿ. ಒಗ್ಗಟ್ಟು ಕೇವಲ ಚುನಾವಣೆಗೆ ಮಾತ್ರ ಸೀಮಿತಗೊಳ್ಳ ಬಾರದು. ಹೋರಾಟ ನಿರಂತರವಾಗಿ ನಡೆಯಬೇಕೆಂದು ಆಶಿಸಿದರು.

ವಕೀಲ ಅನಿಸ್ ಪಾಷ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಅಹಿಂದ ವರ್ಗಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಪಡೆಯಲು ಹೋರಾಟ ಮಾಡುವಂತಾಗಬೇಕೆಂದು ತಿಳಿಸಿದರು.

ಜಾತಿ ಗಣತಿ ವರದಿ ಬಿಡುಗಡೆಗೆ ಒತ್ತಾಯಿಸಲು ಎಲ್ಲಾ ಸಮುದಾಯಗಳು ಒಂದಾಗಬೇಕು. ಇಲ್ಲದಿದ್ದಲ್ಲಿ ವರದಿ ಜಾರಿ ವಿಳಂಬವಾಗುತ್ತದೆ. ಸಂಘಟಿತ ಹೋರಾಟಕ್ಕೆ ಸಜ್ಜಾಗಬೇಕೆಂದು ಸಲಹೆ ನೀಡಿದರು.

ಎಸ್.ಎಂ. ಸಿದ್ಧಲಿಂಗಪ್ಪ ಮಾತನಾಡಿ, ಸಮೀಕ್ಷಾ ವರದಿಯನ್ನು ಪ್ರಬಲ ಸಮು ದಾಯಗಳು ಬಿಡುಗಡೆ ಮಾಡಬಾರದೆಂದು ವಿರೋಧಿಸಿ ನಿರ್ಣಯಗಳನ್ನು ಕೈಗೊಂಡಿದ್ದು, ಅಹಿಂದ ವರ್ಗಗಳೊಂದಿಗೆ ನಿರ್ಣಯಗಳನ್ನು ಚರ್ಚಿಸಿ, ಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಸಚಿವರಿಗೆ ಸಲ್ಲಿಸಲಾಗುವುದು ಎಂದರು.

ಇನ್‌ಸೈಟ್ಸ್ ಐಎಎಸ್ ತರಬೇತಿ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಮಾತನಾಡಿದರು.

ಹಾಲೇಕಲ್ ಸಿ. ವೀರಣ್ಣ, ಆವರಗೆರೆ ಹೆಚ್.ಜಿ. ಉಮೇಶ್, ದೀಟೂರು ಚಂದ್ರು, ಶಫಿ, ದಾಸರ ತಿಪ್ಪಣ್ಣ, ರಾಜು ಮೌರ್ಯ, ಮಂಜಾನಾಯ್ಕ, ಡೈಮಂಡ್ ಮಂಜುನಾಥ್, ಜಿ. ಷಣ್ಮುಖಪ್ಪ, ಹೆಚ್.ಸಿ. ಗುಡ್ಡಪ್ಪ, ಆರ್.ಬಿ. ಪರಮೇಶ್, ರಾಜು ಪಾಟೀಲ್, ಚಂದ್ರು ಐರಣಿ, ಮತ್ತಿತರರಿದ್ದರು.

# ದೇವಸ್ಥಾನಗಳು ನೆಮ್ಮದಿ ನೀಡುವ ಕೇಂದ್ರಗಳು

(1ನೇ ಪುಟದಿಂದ) ವಹಿಸಿದ್ದರು. ಮಾಜಿ ಶಾಸಕ ಪ್ರೊ. ಲಿಂಗಣ್ಣ, ಕೇಸರಿ ವಿದ್ಯಾಸಂಸ್ಥೆ ಅಧ್ಯಕ್ಷ ಅತ್ತಿಗೆರೆ ಎ.ಒ.ರವಿ, ಕುರ್ಕಿ ಗ್ರಾಪಂ ಉಪಾಧ್ಯಕ್ಷ ಕೆ.ಎಂ.ನಿಂಗಪ್ಪ, ನಿವೃತ್ತ ಉಪಾಧ್ಯಾಯ ಸಿದ್ದಬಸಪ್ಪ, ಹದಡಿ ಪಿಎಸ್‌ಐ ಸಂಜೀವ್ ಕುಮಾರ್, ಕುರ್ಕಿ ಗ್ರಾಮದ ಓದೋಗೌಡ್ರ ರೇವಣ ಸಿದ್ದಪ್ಪ, ಕೊಟ್ರಪ್ಪ, ನಿಂಗಪ್ಪ ಸೇರಿದಂತೆ ಇನ್ನಿತರರಿದ್ದರು.

# ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವಸ್ತು ಪ್ರದರ್ಶನ ಸಹಕಾರಿ

ದಾವಣಗೆರೆ, ನ.19- ವಸ್ತುಪ್ರದರ್ಶನಗಳು ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಎಂದು ಜೈನ್ ವಿದ್ಯಾಲಯದ ಅಧ್ಯಕ್ಷ ಹೆಚ್. ರಮೇಶ್ ಕುಮಾರ್ ಹೇಳಿದರು.

ನಗರದ ಶಾಮನೂರು ಬಳಿಯ ಸಿಬಿಎಸ್‌ಇ ಜೈನ್ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕಲಾ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಶಾಲೆಗಳಲ್ಲಿ ಹಮ್ಮಿಕೊಳ್ಳುವ ವಸ್ತುಪ್ರದರ್ಶನ ಕಾರ್ಯಕ್ರಮಗಳು ಮಕ್ಕಳು ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಲು ಒಂದು ಉತ್ತಮ ವೇದಿಕೆಯಾಗಿದ್ದು, ಮಕ್ಕಳಲ್ಲಿರುವ ಪ್ರತಿಭೆಗಳನ್ನು ಗುರುತಿಸಲು ಸಹಕಾರಿಯಾಗಲಿವೆ ಎಂದರು.

ಚಂದ್ರಯಾನ-3 ಮೂಲಕ ಭಾರತ ವಿಶ್ವದಲ್ಲೇ ನಂಬರ್ ಒನ್ ಸ್ಥಾನದಲ್ಲಿದೆ. ಮುಂಚೆಯಲ್ಲ ಭಾರತವನ್ನು ಕಡೆಗಣಿಸುತ್ತಿದ್ದ ವಿಶ್ವದ ದೊಡ್ಡ ದೊಡ್ಡ ದೇಶಗಳು ಭಾರತದ ವಿಜ್ಞಾನಿಗಳ ಜೊತೆ ಕೆಲಸ ಮಾಡಲು ಉತ್ಸುಕವಾಗಿವೆ. ಅಮೆರಿಕದಂತಹ ದೊಡ್ಡ ದೇಶ ಇಸ್ರೋದ ಜೊತೆ ಕೆಲಸ ಮಾಡಲು ಕೋಟಿ ಕೋಟಿ ರೂ. ಆಫರ್‌ಗಳನ್ನು ಮಾಡಿದ್ದು, ಇಂತಹ ಹಂತಕ್ಕೆ ನಾವು ತಲುಪಿದ್ದೇವೆ. ಈ ದಾರಿಯಲ್ಲಿ ನಮ್ಮ ಮಕ್ಕಳನ್ನೂ ಸಹ ನಾವು ಬೆಳೆಸಬೇಕು ಎಂದರು.

ಶ್ರೀ ಭಗವಾನ್ ಮಹಾವೀರ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಜೆ. ರಮೇಶ್ ಕುಮಾರ್ ಮಾತನಾಡಿ, ಮಕ್ಕಳ ಕನಸುಗಳನ್ನು ನನಸು ಮಾಡಲು ವಸ್ತುಪ್ರದರ್ಶನ ಕಾರ್ಯಕ್ರಮಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡಲಿವೆ. ಮಕ್ಕಳು ಜೀವನದಲ್ಲಿ ಮುಂದೆ ಏನಾಗಬಹುದು ಎಂಬ ಸೂಚನೆಯನ್ನು ವಸ್ತುಪ್ರದರ್ಶನ ಕಾರ್ಯಕ್ರಮಗಳು ನೀಡುತ್ತವೆ ಎಂದರು.

ಪಠ್ಯದಲ್ಲಿ ಬರುವ ವಿಷಯಗಳನ್ನು ಪ್ರಾಯೋಗಿಕವಾಗಿ ವಸ್ತು ಪ್ರದರ್ಶನದಲ್ಲಿ ತೋರಿಸಬಹುದು. ಮಕ್ಕಳು ವಸ್ತುಪ್ರದರ್ಶನದಲ್ಲಿ ಉತ್ಸುಕರಾಗಿ ಪಾಲ್ಗೊಳ್ಳುವುದರಿಂದ ಪಠ್ಯದಲ್ಲಿರುವ ವಿಷಯಗಳು ಚೆನ್ನಾಗಿ ಮನದಟ್ಟಾಗುತ್ತವೆ ಎಂದರು.

ಶಾಲೆಯ ಎಲ್.ಕೆ.ಜಿ ಮಕ್ಕಳಿಂದ ಹಿಡಿದು 10ನೇ ತರಗತಿಯ ಮಕ್ಕಳು ತಮ್ಮ ಪುಟ್ಟ ಪುಟ್ಟ ಕೈಗಳಲ್ಲಿ ಕಲಾ ಮತ್ತು ವಿಜ್ಞಾನ ಮಾದರಿಗಳನ್ನು ತಯಾರಿಸಿ, ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳಾದ ಜಶ್ವಿ ಎನ್. ಜೈನ್ ನಾಲ್ಕು ಹಂತದ ನೀರು ಶುದ್ದೀಕರಣ ಘಟಕವನ್ನು, ಜಾಹ್ನವಿ ಹೆಚ್.ಎಸ್ ಪೆರಿಸ್ಕೋಪ್, ನಿಶ್ಚಿತಾ ಬಿ.ಪಿ ಮಿನಿ ಎಲೆಕ್ಟ್ರಿಕ್ ಸರ್ಕ್ಯೂಟ್, ರಾಜೇಶ್ವರಿ ಫ್ರೀ ಎನರ್ಜಿ ಲೈಟ್, ತೃಪ್ತಿ ಸೋಲಾರ್ ಸಿಸ್ಟಮ್, ತನ್ವಿಕಾ ಎಸ್, ಗೌರಿಕ ಹೆಚ್.ಕೆ ಕಾರ್ಬನ್ ಪ್ಯೂರಿಫಿಕೇಷನ್, ರಿಯಾಂಶಿ, ವಿದ್ಯಾಶ್ರೀ ಮತ್ತು ಮಾನಸ ವಿದ್ಯುತ್ ತೊಟ್ಟಿಲು, ಸಂಪ್ರಿತಾ ಮತ್ತು ಸಿರಿ ಟಿ.ಜಿ ಆಡ್ ಸುರಿಸುವ ಮಳೆ, 9ನೇ ತರಗತಿಯ ವಿದ್ಯಾರ್ಥಿ ಮೇಘನಾ ಮನುಷ್ಯನ ಕಣ್ಣು, ಚೇತನ ಮತ್ತು ಅಭಿಜ್ಞ ಹನಿ ನಿರಾವರಿ ಸೇರಿದಂತೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಅನೇಕ ರೀತಿಯ ಮಾದರಿಗಳನ್ನು ತಯಾರಿಸಿದ್ದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಅನಿತಾ ರಜಪೂತ್, ಸಯೀದಾ ಖಾನಂ, ಕುಮಾರ್ ಗಾಂಧಿ, ಪ್ರಕಾಶ್ ಜೈನ್ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

# ಜೀವನದ ನಡುವೆ ಕಿರಿಯರ ತಳಮಳ

(1ನೇ ಪುಟದಿಂದ) ಆರ್ಥಿಕತೆಯಾಯಿತು ಹಾಗೂ ಉತ್ತಮ ಗುಣಮಟ್ಟದ ಜೀವನ ಒದಗಿಸಿತು. ಆರ್ಥಿಕತೆ ಬೆಳೆಯುವ ಕಾಲದಲ್ಲೇ ವಸತಿ ಹಾಗೂ ಶಿಕ್ಷಣದ ಹಣಕಾಸು ಒತ್ತಡವೂ ಎದುರಾಯಿತು. ಇದರಿಂದಾಗಿ ಕೆಲವರು ಅವಧಿ ಮೀರಿ ದುಡಿದರು, ಹಲವರು ಕಾರ್ಪೊರೇಟ್ ಒತ್ತಡಕ್ಕೆ ಸಿಲುಕಿ ಸಮಾಧಿಯಾದರು.

ಇಷ್ಟಾದರೂ, ಯುದ್ಧಾನಂತರದ ಈ ಪೀಳಿಗೆ ಇಡೀ ದೇಶವನ್ನು 1980ರವರೆಗೆ ಅಚ್ಚರಿ ತರುವ ರೀತಿಯಲ್ಲಿ ಬೆಳೆಸಿತು. ಅಷ್ಟರ ವೇಳೆಗೆ ಈ ಪೀಳಿಗೆಯ ವಯಸ್ಸು 40ಕ್ಕೆ ತಲುಪಿತ್ತು. ಇವರು ಗಳಿಸಿದರು, ಉಳಿಸಿದರು. ಮುಂದಿನ ಪೀಳಿಗೆಗಾಗಿ ಕನಸುಗಳನ್ನು ಕಟ್ಟಿಕೊಟ್ಟರು.

ದುರಾದೃಷ್ಟವಶಾತ್ ಈ ಹಂತದಲ್ಲಿ ಜಪಾನಿನ ಆರ್ಥಿಕ ಪವಾಡ ಇದ್ದಕ್ಕಿದ್ದಂತೆ ಸ್ಥಗಿತಗೊಂಡಿತು. 1990ರ ನಂತರದಲ್ಲಿ ನಡೆದದ್ದೆಲ್ಲಾ ಜಪಾನ್ ಪಾಲಿಗೆ ಸವಾಲಿನ ಬೆಳವಣಿಗೆಗಳು. ಉದ್ಯೋಗಾವಕಾಶಗಳು ಕ್ಷೀಣಿಸಿದವು, ಅನಿಶ್ಚಿತತೆ ಹಾಗೂ ಹತಾಶೆ ಹೆಚ್ಚಾಗುತ್ತಾ ಬಂದವು.

ಇದರಿಂದ ನವ ಪೀಳಿಗೆ ಸಾಕಷ್ಟು ಸಮಸ್ಯೆ ಎದುರಿಸಬೇಕಾಯಿತು. ಆದರೆ, ಹಿರಿಯ ಪೀಳಿಗೆ ಮಾತ್ರ ಬಹುತೇಕ ಸುರಕ್ಷಿತವಾಗಿತ್ತು. ಜಪಾನ್‌ನ ಉದ್ಯೋಗ ವ್ಯವಸ್ಥೆ ಹಿರಿಯರನ್ನು ರಕ್ಷಿಸಿತು. ಯುವ ಪೀಳಿಗೆ ಉದ್ಯೋಗಕ್ಕಾಗಿ ಪರದಾಡುತ್ತಿದ್ದರೆ, ಹಿರಿಯ ಪೀಳಿಗೆಯವರಲ್ಲಿ ಬಹುತೇಕರು ಕೆಲಸ ಉಳಿಸಿಕೊಂಡರು. ಹಿರಿಯ ಪೀಳಿಗೆಯ ಹಲವರು ತಮ್ಮ ಉಳಿತಾಯದ ಹಣದಿಂದ ಉತ್ತಮ ಜೀವನ ಕಂಡುಕೊಳ್ಳಲು ಸಾಧ್ಯವಾಯಿತು. ಆದರೆ, ಈ ನಡುವೆಯೇ ಬಂದ ಆರ್ಥಿಕ ಹಿಂಜರಿತ ಹೊಸ ಸವಾಲುಗಳನ್ನು ತಂದಿತು. ಹಿರಿಯರ ಸಂಖ್ಯೆ ನಿರಂತರವಾಗಿ ಹೆಚ್ಚಾಗುತ್ತಾ ಸಾಗಿದಂತೆ, ಅವರ ನಿವೃತ್ತಿ ನಿರ್ವಹಿಸುವುದು ಸಮಸ್ಯೆಯಾಯಿತು. ಈಗಾಗಲೇ ಒತ್ತಡದಲ್ಲಿರುವ ಪಿಂಚಣಿ ಹಾಗೂ ಆರೋಗ್ಯ ಯೋಜನೆಗಳು ಉಳಿಯುತ್ತವೆಯೇ? ಎಂಬ ಪ್ರಶ್ನೆಯೂ ಹುಟ್ಟಿಕೊಂಡಿತು. 1980ರ ನಂತರ ಜನಿಸಿದವರು ಈ ಎಲ್ಲ ಹೊಣೆಗಳನ್ನು ಹೊತ್ತುಕೊಳ್ಳಬೇಕಾಯಿತು.

ಸಹಜವಾಗಿಯೇ ಎರಡು ಪೀಳಿಗೆಗಳ ನಡುವಿನ ಚಕಮಕಿ ಭುಗಿಲೆದ್ದಿತು. ಈಗಿನ ಪೀಳಿಗೆಯವರು ಸೋಮಾರಿಗಳು ಹಾಗೂ ಬದ್ಧತೆ ಇಲ್ಲದವರು ಎಂದು ಹಿಂದಿನ ಪೀಳಿಗೆ ಟೀಕಿಸುತ್ತಿದೆ. ಹಿರಿಯರು ಬೆಳವಣಿಗೆಯ ಯುಗದಲ್ಲಿ ಹುಟ್ಟಿದ್ದು ಅವರ ಅದೃಷ್ಟ ಎಂದು ಯುವ ಪೀಳಿಗೆ ಹೇಳುತ್ತಿದೆ. ಇಷ್ಟು ಸಾಲದು ಎಂಬಂತೆ, ಹಿರಿಯ ಪೀಳಿಗೆಯ ನಿವೃತ್ತಿಯ ಹೊಣೆಯನ್ನು ನಾವು ಹೊರಬೇಕಿದೆ ಎಂದು ಯುವ ಪೀಳಿಗೆ ನಿಟ್ಟುಸಿರು ಬಿಡುತ್ತಿದೆ.

ಜಪಾನ್‌ನಲ್ಲಿ ಹಿರಿಯರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ರಾಜಕಾರಣಿಗಳೂ ಸಹ ಹಿರಿಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಎಚ್ಚರಿಕೆಯ ಮಾತುಗಳನ್ನಾಡುತ್ತಿದ್ದಾರೆ. ಸದ್ಯಕ್ಕೆ ಜಪಾನ್ ಎದುರಿಸುತ್ತಿರುವ ಸಮಸ್ಯೆಗೆ ಪರಿಹಾರ ಸುಲಭ ಸಾಧ್ಯವಿಲ್ಲದಂತಾಗಿದೆ.

ವಿಶ್ವದಾದ್ಯಂತ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇಂದು ಜಪಾನ್‌ನಲ್ಲಿ ಉಂಟಾಗಿರುವ ಸಮಸ್ಯೆ, ನಾಳೆ ಎಲ್ಲೆಡೆ ಕಂಡು ಬರುವುದರಲ್ಲಿ ಸಂಶಯವಿಲ್ಲ. ಜಪಾನ್ ಸಮಸ್ಯೆ ಉಳಿದವರಿಗೂ ಪಾಠವಾಗಬೇಕಿದೆ.

## ಉನ್ನತ ವ್ಯಾಸಂಗ : ಅಲ್ಪಸಂಖ್ಯಾತರ ಸಮುದಾಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

ದಾವಣಗೆರೆ, ನ. 19 - ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಅಲ್ಪ ಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನ ಯೋಜನೆಯಡಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿ ವೇತನ ಯೋಜನೆಯಡಿ ಅರ್ಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆಯ ದಿನ. ವೆಬ್‌ಸೈಟ್ https://dom.karnataka.gov.in ನ್ನು ವೀಕ್ಷಿಸಿ ಅಥವಾ ದೂ.ಸಂ: 080-22535902 ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆಯಬಹುದು. ಎಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

# ವೈಜ್ಞಾನಿಕ ಆಸಕ್ತಿಗಳು ನಿಖರ ಸಾಧನಗಳ ಕಡೆಗೆ ಬದಲಾಗುತ್ತಿವೆ



**ರಾಣೇಬೆನ್ನೂರು ತರಳಬಾಳು ಕಾಲೇಜು ಕಾರ್ಯಾಗಾರದಲ್ಲಿ ಡಾ.ಗೋಪಾಲಕೃಷ್ಣ ಹೆಗಡೆ**

ರಾಣೇಬೆನ್ನೂರು, ಅ.19- ವೈಜ್ಞಾನಿಕ ಆಸಕ್ತಿಗಳು ಹೊಸ ವರ್ಗದ ನಿಖರ ಸಾಧನಗಳ ಕಡೆಗೆ ಬದಲಾಗುತ್ತಿವೆ ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ನ ಸಂಶೋಧನಾ ಪ್ರಾಧ್ಯಾಪಕ ಡಾ. ಗೋಪಾಲಕೃಷ್ಣ ಹೆಗಡೆ ಹೇಳಿದರು.

ಇಲ್ಲಿನ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿನ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಬಯೋಮೆಡಿಕಲ್ ಅಪ್ಲಿಕೇಶನ್‌ಗಳಿಗಾಗಿ ಮೈಕ್ರೋ ಎಲೆಕ್ಟ್ರೋ ಮೆಕ್ಯಾನಿಕಲ್ ಸಿಸ್ಟಮ್ಸ್ ಮತ್ತು ನ್ಯಾನೋ ಎಲೆಕ್ಟ್ರೋ ಮೆಕ್ಯಾನಿಕಲ್ ಸಿಸ್ಟಮ್ ತಂತ್ರಜ್ಞಾನದಲ್ಲಿನ ಇತ್ತೀಚಿನ ಪ್ರವೃತ್ತಿಗಳು' ಎಂಬ ವಿಷಯದ ಬಗ್ಗೆ ಅಧ್ಯಾಪಕರ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಲೆಕ್ಟ್ರಾನಿಕ್ಸ್ ಮಿನಿಯೇಟರೈಸೇಶನ್ ಕ್ಷೇತ್ರದಲ್ಲಿನ ಗಮನಾರ್ಹ ಪ್ರಗತಿಗಳು ವೈಜ್ಞಾನಿಕ ಆಸಕ್ತಿಯನ್ನು ನಿಖರ ಸಾಧನಗಳ ಕಡೆಗೆ ಬದಲಾಯಿಸಿದ್ದು, ಇದು ಬಯೋ ಮೆಡಿಕಲ್ ಸೆನ್ಸಿಂಗ್, ಮೆಕ್ಯಾನಿಕ್ಸ್, ಮೆಟೀರಿಯಲ್ಸ್, ಸ್ಟ್ರಕ್ಚರ್ಸ್, ಎಲೆಕ್ಟ್ರಾನಿಕ್ ಸಿಸ್ಟಮ್ಸ್, ಮೈಕ್ರೋ, ನ್ಯಾನೋ ಫ್ಯಾಬ್ರಿಕೇಶನ್ ವಿಭಾಗಗಳನ್ನು ಸಂಯೋಜಿಸುವ ಇಂಟರ್ಡಿಸಿಪ್ಲೆನರಿ ಕೋರ್ಸ್ ಆಗಿದೆ.

ತಂತ್ರಜ್ಞಾನವು ವಿವಿಧ ಸೂಕ್ಷ್ಮ ನ್ಯಾನೋ ಮಾರಾಟ ಸಂವೇದಕಗಳು ಮತ್ತು ಒಂದೇ ಚಿಪ್‌ನಲ್ಲಿ ಆಕ್ಟಿವೇಟರ್‌ಗಳನ್ನು ಸಂಯೋಜಿಸುತ್ತದೆ ಎಂದು ತಿಳಿಸಿದರು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಬಿ. ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥ ಡಾ.ಬಿ. ಮಹೇಶ್ವರಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಾಗಾರದ ಸಂಚಾಲಕ ಡಾ. ಶ್ರೀನಿವಾಸರಾವ್ ಉದಾರ ಕಾರ್ಯಾಗಾರದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಡಾ. ಬಿ. ಮಹೇಶ್ವರಪ್ಪ ಸ್ವಾಗತಿಸಿದರು. ಪ್ರೊ. ಬಿ. ಜಿ. ಚಂದ್ರಶೇಖರ್ ವಂದಿಸಿದರು. ಪ್ರೊ. ಸಿ. ಎಂ. ಶ್ವೇತಾ ಕಾರ್ಯಕ್ರಮ ನಿರೂಪಿಸಿದರು

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ಮೃತ್ಯುಂಜಯ ವಾಲಿ ಇವರು ಪರಿಶಿಷ್ಟದಲ್ಲಿ ವಿವರಿಸಿರುವ ಸ್ವತ್ತನ್ನು ಬಿ.ಎಸ್. ಸುಲೋಚನಮ್ಮ ಕೋಂ ಟಿ. ಮಹೇಶ್ವರಪ್ಪ, ಟಿ.ಎಂ. ಹರೀಶ್ ಬಿನ್.ಟಿ. ಮಹೇಶ್ವರಪ್ಪ, ಟಿ.ಎಂ.ಅರುಣ ಕುಮಾರ್ ಬಿನ್ ಟಿ. ಮಹೇಶ್ವರಪ್ಪ ಮತ್ತು ಟಿ.ಎಂ. ಕಿರಣ್ ಕುಮಾರ್ ಬಿನ್ ಟಿ. ಮಹೇಶ್ವರಪ್ಪ, ಇವರಿಂದ ಕ್ರಯಕ್ಕೆ ಪಡೆಯುವ ಉದ್ದೇಶ ಹೊಂದಿರುತ್ತಾರೆ. ಸದರಿ ಸ್ವತ್ತು ಶ್ರೀಮತಿ ಶಶಿರೇಖಾ ಕೋಂ ಸೋಮಸುಂದರ ಇವರಿಂದ ಸದರಿಯವರು ದಾವಣಗೆರೆ ಉಪನೋಂದಣಾಧಿಕಾರಿಗಳವರ ನಂ.6758/2020-01, ದಿನಾಂಕ 07.09.2020ರ ನೋಂದಾಯಿತ ಕ್ರಯ ಪತ್ರದ ಮೂಲಕ ಜಂಟಿಯಾಗಿ ಕ್ರಯಕ್ಕೆ ಪಡೆದು, ಮಾಲೀಕರು ಹಾಗೂ ಹಕ್ಕುದಾರರು ಆಗಿ ಸ್ವಾಧೀನವನ್ನೂ ಸಹ ಹೊಂದಿರುತ್ತಾರೆ. ಸದರಿ ಬಿ.ಎಸ್. ಸಲೋಚನಮ್ಮ ಕೋಂ ಟಿ. ಮಹೇಶ್ವರಪ್ಪ, ಟಿ.ಎಂ. ಹರೀಶ್ ಬಿನ್ ಟಿ.ಮಹೇಶ್ವರಪ್ಪ ಮತ್ತು ಟಿ.ಎಂ. ಅರುಣ ಕುಮಾರ್ ಬಿನ್ ಟಿ. ಮಹೇಶ್ವರಪ್ಪ ಮತ್ತು ಟಿ.ಎಂ. ಕಿರಣ್ ಕುಮಾರ್ ಬಿನ್.ಟಿ. ಮಹೇಶ್ವರಪ್ಪ ಇವರು ಪ್ರಸ್ತುತ ಪರಿಶಿಷ್ಟ ಸ್ವತ್ತನ್ನು ನನ್ನ ಕಕ್ಷಿದಾರರಾದ ಶ್ರೀ ಮೃತ್ಯುಂಜಯ ವಾಲಿರವರಿಗೆ ಮಾರಾಟ ಮಾಡುವ ಇಚ್ಛೆ ಹೊಂದಿರುತ್ತಾರೆ.

ಆದುದರಿಂದ ಸದರಿ ಖರೀದಿ ವ್ಯವಹಾರಕ್ಕೆ ಸಂಬಂಧಿಸಿದಂತೆ, ಯಾರದಾದರೂ ತಕರಾರು ಇದ್ದಲ್ಲಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ದಿನಾಂಕ 24.11.2023 ಒಳಗಾಗಿ ಸಂಜೆ 6.30ರಿಂದ ರಾತ್ರಿ 10.30ರ ಸಮಯದಲ್ಲಿ ಕೆಳಗೆ ನಮೂದಿಸಿದ ನ್ಯಾಯವಾದಿಗಳ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು. ತದ ನಂತರ ಬಂದಂತಹ ದಾಖಲಾತಿಗಳನ್ನು/ತಕರಾರುಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ. ಒಂದು ವೇಳೆ ದಿನಾಂಕ 24.11.2023ರ ಒಳಗಾಗಿ ಯಾವುದೇ ತಕರಾರು ಬರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರದು ಯಾವುದೇ ಬಗೆಯ ತಕರಾರು ಇಲ್ಲ ಎಂದು ಪರಿಗಣಿಸಿ, ಷೆಡ್ಯೂಲ್ ಸ್ವತ್ತನ್ನು ಖರೀದಿಸಲಾಗುವುದು.

**ನ್ಯಾಯವಾದಿಗಳು**

**ಪರಿಶಿಷ್ಟ**

ದಾವಣಗೆರೆ ತಾಲ್ಲೂಕು ಸಬ್‌ರಿಜಿಸ್ಟ್ರಾರ್‌ರವರ ಕಛೇರಿ ವ್ಯಾಪ್ತಿಗೆ ಒಳಪಟ್ಟಿರುವ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರಿ.ಸರ್ವೆ ನಂ. 211/4, ವಿಸ್ತೀರ್ಣ ಎಕರೆ-00, ಗುಂಟೆ-22ವುಳ್ಳ ಜಮೀನು ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 299872, ದಿನಾಂಕ 17.02.2022ರ ಪ್ರಕಾರ ವ್ಯವಸಾಯೇತರ ವಸತಿ ಉದ್ದೇಶಕ್ಕೆ ಅಲಿನೇಷನ್ ಆಗಿದ್ದು, ಮತ್ತು ಶ್ಯಾಬನೂರು ಗ್ರಾಮದ ರಿ.ಸರ್ವೆ ನಂ. 211/7 ವಿಸ್ತೀರ್ಣ ಎಕರೆ-00 ಗುಂಟೆ-05ವುಳ್ಳ ವಿಸ್ತೀರ್ಣವು ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಆಗಿರುತ್ತದೆ.

ಈ ರೀತಿ ಅಲಿನೇಷನ್ ಆಗಿರುವ ವಿಸ್ತೀರ್ಣಗಳು ಮತ್ತು ಲಗತ್ತಾದ ಶ್ಯಾಬನೂರು ಗ್ರಾಮದ ರಿ. ಸರ್ವೆ ನಂ. 211/1 ವಿಸ್ತೀರ್ಣ ಎಕರೆ-4, ಗುಂಟೆ-20ವುಳ್ಳ ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ-295184 ದಿನಾಂಕ 27.11.2022ರ ಪ್ರಕಾರ ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಅಲಿನೇಷನ್ ಆದ ಪ್ರದೇಶವನ್ನು ಒಂದುಗೂಡಿಸಿ ಕಂಬೈನ್ಸ್ ಲೇ ಔಟ್ ಅಭಿವೃದ್ಧಿ ಪಡಿಸಿದ್ದು ಸದ್ರಿ ಪ್ರದೇಶದಲ್ಲಿ ವಿಂಗಡಿಸಿರುವ ಸೈಟುಗಳು ಬಗ್ಗೆ ತಯಾರು ಮಾಡಿದ ಸೈಟ್ ಪ್ಲಾನನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ನಂ.ದಾಹನಪ್ರಾ/ಯೋವಿ/ಹಂಅಂವವಿ/1682/2023-24/999, ದಿನಾಂಕ 10.08.2023ರ ಪ್ರಕಾರ ಜಂಟಿ ಅಂತಿಮ ವಸತಿ ವಿನ್ಯಾಸ ಅನುಮೋದನೆ ಪಡೆದಿದ್ದು, ಮತ್ತು ಖಾತೆದಾರರೆಲ್ಲರೂ ಸೇರಿ ದಿನಾಂಕ 26.07.2023ರಂದು ಒಂದು ಪರಸ್ಪರ ಒಪ್ಪಿಗೆ ಪತ್ರದ ಮೂಲಕ ನಿವೇಶನಗಳನ್ನೂ ಹಂಚಿಕೆ ಮಾಡಿಕೊಂಡು ಅದರ ಪ್ರಕಾರ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಹಿಂಬರಹ ನಂ.ದಾಮಪಾ/ಕಂಶಾ/ಭೂ-ಪರಿ/ಸಿಆರ್.07/2023-24 ದಿನಾಂಕ 07.09.2023ರ ಪ್ರಕಾರ ಡೋರ್ ನಂಬರ್ ಹಾಗೂ ಖಾತೆ ದಾಖಲು ಮಾಡಿಸಿರುತ್ತಾರೆ. ಸದ್ರಿ ಸ್ವತ್ತು ಜೆ.ಹೆಚ್. ಪಟೇಲ್ ಬಡಾವಣೆ ಹತ್ತಿರ ಬರತಕ್ಕ ಸ್ವತ್ತಾಗಿರುತ್ತದೆ. ಈ ರೀತಿ ವಿಂಗಡಿಸಿರುವ ಸೈಟುಗಳು ಪೈಕಿ ನಮ್ಮಗಳ ಬಾಬ್ತು ಈ ದಿವಸ ನಿಮಗೆ ಕ್ರಯಕ್ಕೆ ಕೊಟ್ಟ ಸೈಟಿನ ವಿವರ : ಸೈಟ್ ನಂ. 36 ಮತ್ತು 37.

| ಸೈಟ್ ನಂ. 36 | | ಸೈಟ್ ನಂ. 37 | |
|---|---|---|---|
| ಪೂರ್ವಕ್ಕೆ<br>ಪಶ್ಚಿಮಕ್ಕೆ<br>ಉತ್ತರಕ್ಕೆ<br>ದಕ್ಷಿಣಕ್ಕೆ | ರಸ್ತೆ<br>ಸೈಟ್ ನಂಬರ್ 33 ಮತ್ತು 34.<br>ಸೈಟ್ ನಂಬರ್ 37<br>ಸೈಟ್ ನಂಬರ್ 35 | ಪೂರ್ವಕ್ಕೆ<br>ಪಶ್ಚಿಮಕ್ಕೆ<br>ಉತ್ತರಕ್ಕೆ<br>ದಕ್ಷಿಣಕ್ಕೆ | ರಸ್ತೆ<br>ಸೈಟ್ ನಂಬರ್ 33 ಮತ್ತು 34.<br>ಸೈಟ್ ನಂಬರ್ 37<br>ಸೈಟ್ ನಂಬರ್ 35 |

**ಸ್ವಾಮಿ ಕೆ.ಜಿ.ಕೆ, ಎಸ್.ಜಿ. ಮಹಾವೀರ್**
ನ್ಯಾಯವಾದಿಗಳು
ನಂ. 417/4ಎ, 4ಬಿ, 'ಲಾ ಸಲ್ಯೂಷನ್ಸ್' 1ನೇ ಮಹಡಿ, ಬೆನಕೇಶ್ ಪ್ಲಾಜಾ, ಜನತಾವಾಣಿ ಕಛೇರಿ ಎದುರು, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ. ಮೊ : 98444 13266, 98450 03326

## ಸಾರ್ವಜನಿಕ ಪ್ರಕಟಣೆ

**ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)**

**ವಸೂಲಾತಿ ಅಧಿಕಾರಿಗಳು (ನಿ. 441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕ.ರಾ.ಸೌ.ಸಂ.ಸ.ನಿ., ಮಲ್ಲೇಶ್ವರಂ, ಬೆಂಗಳೂರು. ಇವರ ನ್ಯಾಯಾಲಯದಲ್ಲಿ**

### ಸ್ಥಿರಾಸ್ತಿ ಬಹಿರಂಗ ಹರಾಜು ನೋಟಿಸ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **ಕರಾವಳಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ.**, # 2688/2, ಡಾ. ಶ್ಯಾಮಸುಂದರ್ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ-577006. ಇವರಿಂದ ಈ ಕೆಳಕಂಡ ಸುಸ್ತಿದಾರರ ಮೇಲೆ ಸಹಕಾರಿಯು ದಾವಾ ಕ್ರಮ ಜರುಗಿಸಿ, ಡಿಕ್ರಿ ಹುಕ್ಕುಂ ಪಡೆದು, ಸದರಿ ಸಾಲದ ವಸೂಲಾತಿಗಾಗಿ ಸ್ಥಿರಾಸ್ತಿ ಸೊತ್ತನ್ನು ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ವೇಳೆಯಲ್ಲಿ ಬಹಿರಂಗ ಹರಾಜು ಮಾಡಲಾಗುತ್ತೆ. ಹರಾಜಿನಲ್ಲಿ ಸ್ಥಿರ ಸೊತ್ತನ್ನು ಕೊಳ್ಳಲು ಇಚ್ಛೆ ಉಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸೊತ್ತನ್ನು ಪಡೆಯಬಹುದು.

| ಕ್ರ.ಸಂ. | ಬಾಕಿದಾರರ ಹೆಸರು ಮತ್ತು ಇ.ಪಿ. ಸಂಖ್ಯೆ | ಬಾಕಿ ಮೊತ್ತ (ಅಸಲು + ಬಡ್ಡಿ) (30.10.2023ರವರೆಗೆ) | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸ್ವತ್ತಿನ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | **ಶ್ರೀ ತ್ಯಾಗರಾಜ್ ಬಿನ್ ಚನ್ನಪ್ಪ.ವಿ.ಎ**<br>ಇಪಿ ಸಂಖ್ಯೆ : ಕರಾಸೌಸಂಸನಿ/ವಅ/1220/2021-22 | **ರೂ.33,12,981/-** | ದಾವಣಗೆರೆ ನಗರ, ಶ್ರೀರಾಮ್ ಬಡಾವಣೆ, ನಿಟ್ಟುವಳ್ಳಿ, ಸೈಟ್ ನಂ: 107, ಡೋರ್ ನಂ: 685/6/107, ಅಳತೆ: 20'*30' ವಾಸದ ಮನೆ, ಚಕ್ಕು ಬಂದಿ , ಪೂರ್ವಕ್ಕೆ :- ರೋಡ್, ಪಶ್ಚಿಮಕ್ಕೆ :- ಸೈಟ್ ನಂ.106, ಉತ್ತರಕ್ಕೆ :- ರೋಡ್, ದಕ್ಷಿಣಕ್ಕೆ :- ಸೈಟ್ ನಂ.82. | **ದಿನಾಂಕ: 20/11/2023 ನೇ ಸೋಮವಾರ**<br>ಬೆಳಿಗ್ಗೆ 11 ಗಂಟೆಗೆ<br>ಸ್ಥಿರ ಸೊತ್ತಿನ ಮುಂಭಾಗದಲ್ಲಿ. | ರೂ. 25,000/- |

**ತ್ಯಾಗರಾಜ್** ಇವರ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 16-11-2023ರ 'ಜನತಾವಾಣಿ' ದಿನಪತ್ರಿಕೆಯಲ್ಲಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ನ್ಯಾಯಾಲಯದಿಂದ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾ ಮಂಡಳ ನಿ., ಬೆಂಗಳೂರು ಇವರ ಪರವಾಗಿ ನೀಡಿದ ಸ್ಥಿರ ಸ್ವತ್ತಿನ ಬಹಿರಂಗ ಹರಾಜು ಬಗ್ಗೆ ಸದರಿ ಬಾಕಿದಾರರಾದ **ಶ್ರೀಮತಿ ನಾಗಮ್ಮ ಕೋಂ. ಅಂಜಿನಪ್ಪ** ಅವರು, ಈ ಹಿಂದೆ ದಿನಾಂಕ 4-10-2008ರಂದು ದಾವಣಗೆರೆ ಉಪನೋಂದಣಾಧಿಕಾರಿ ಕಚೇರಿ, ದಾವಣಗೆರೆ ಇವರ 2ನೇ ಪುಸ್ತಕದ 2032 ಪುಟ ಸಂಖ್ಯೆ 08-09ರಂದು, ದಾವಣಗೆರೆ ಉಪನೋಂದಣಾಧಿಕಾರಿ ಕಚೇರಿ, ದಾವಣಗೆರೆ ಇವರಿಂದ ನಮ್ಮ ಸಹಕಾರಿ ಸುಸ್ತಿ ಸಾಲಗಾರರಾದ **ಶ್ರೀ ತ್ಯಾಗರಾಜ್ ಬಿನ್ ಚನ್ನಪ್ಪ** ವಿ.ಎ. ರವರಿಗೆ ಮಾರಾಟ ಮಾಡಿರುತ್ತಾರೆ ಹಾಗೂ ನಮ್ಮ ಸಹಕಾರಿ ಸಂಘದಿಂದ ತ್ಯಾಗರಾಜ್ ಅವರು ಸುಸ್ತಿ ಸಾಲಗಾರರಾಗಿದ್ದು, ಅವರ ವಿರುದ್ಧ 'ಮಾನ್ಯ ಸೌಹಾರ್ದ ಸಹಕಾರಿ ನ್ಯಾಯಾಲಯ' ಮಲ್ಲೇಶ್ವರಂ, ಬೆಂಗಳೂರು ಇವರ ಆದೇಶದಂತೆ ದಿನಾಂಕ 20-11-2023ರ ಸೋಮವಾರದಂದು ದಿನಾಂಕ ಬೆಳಿಗ್ಗೆ 11 ಗಂಟೆಗೆ, ಸ್ಥಿರ ಸೊತ್ತಿನ ಮುಂಭಾಗದಲ್ಲಿ ಬಹಿರಂಗ ಹರಾಜು ನಡೆಯಲಿದೆ.

| ಕ್ರ.ಸಂ. | ಬಾಕಿದಾರರ ಹೆಸರು ಮತ್ತು ಇ.ಪಿ. ಸಂಖ್ಯೆ | ಬಾಕಿ ಮೊತ್ತ (ಅಸಲು + ಬಡ್ಡಿ) (30.10.2023ರವರೆಗೆ) | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸ್ವತ್ತಿನ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 2) | **ಶ್ರೀಮತಿ ಫಾಮಿದಾ ಬಾನು ಕೋಂ ಜಬೀವುಲ್ಲಾ**<br>ಇಪಿ ಸಂಖ್ಯೆ : ಕರಾಸೌಸಂಸನಿ/ವಅ/1206/2021-22 | **ರೂ.38,93,341/-** | ದಾವಣಗೆರೆ ನಗರ, ಶಿವ ನಗರ ಮೇನ್ ರೋಡ್, ಸೈಟ್ ನಂ.59, ಅಳತೆ: 11.5'*34' ವಾಸದ ಮನೆ ಚಕ್ಕು ಬಂದಿ ಪೂರ್ವಕ್ಕೆ:- ಕನ್ಸರ್ವೆನ್ಸಿ , ಪಶ್ಚಿಮಕ್ಕೆ :- ರೋಡ್, ಉತ್ತರಕ್ಕೆ :- ಸೈಟ್ ನಂ.60, ದಕ್ಷಿಣಕ್ಕೆ :- ಸೈಟ್ ನಂ.58. | **ದಿನಾಂಕ: 22/11/2023 ನೇ ಬುಧವಾರ**<br>ಬೆಳಿಗ್ಗೆ 11 ಗಂಟೆಗೆ<br>ಸ್ಥಿರ ಸೊತ್ತಿನ ಮುಂಭಾಗದಲ್ಲಿ. | ರೂ. 25,000/- |

**ಬಿಡ್ಡುದಾರರಿಗೆ ಷರತ್ತುಗಳು ಅನ್ವಯಿಸುತ್ತವೆ.**

**ಸ್ಥಳ : ದಾವಣಗೆರೆ - ದಿನಾಂಕ : 19.11.2023**

**ಸಹಿ/- ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್ (ನಿ.441) ಹಾಗೂ ವಸೂಲಾಧಿಕಾರಿಗಳು, ಕ.ರಾ.ಸೌ.ಸಂ.ಸ. ಮಹಾಮಂಡಳ ನಿ., ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. ಇವರ ಆದೇಶದ ಮೇರೆಗೆ**

**ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ನಿ., ದಾವಣಗೆರೆ.**

**ಸಹಿ/- ಮಾರಾಟಾಧಿಕಾರಿ, ಕ.ಸೌ.ಪ.ಸ.ನಿ., ದಾವಣಗೆರೆ. ಮೊಬೈಲ್ ಸಂಖ್ಯೆ : 98441 11334**

## ಉಕ್ಕಡಗಾತ್ರಿ : ಅನ್ನ ದಾಸೋಹ ಮಹಾಮಂಟಪ ನಿರ್ಮಾಣಕ್ಕೆ ಚಾಲನೆ



ಮಲೇಬೆನ್ನೂರು, ನ.19- ಸುಕ್ಷೇತ್ರ ಉಕ್ಕಡಗಾತ್ರಿಯ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದುಗೆಯ ದೇವಸ್ಥಾನದ ಬಳಿ ತುಂಗಭದ್ರಾ ನದಿ ದಡದಲ್ಲಿ 5 ಅಡಿ ಎತ್ತರದ ಗಣೇಶ ಮೂರ್ತಿ ಪ್ರತಿಷ್ಠಾಪನೆಯು ಭಾನುವಾರ ಪೂಜಾ ವಿಧಾನಗಳೊಂದಿಗೆ ನಡೆಯಿತು.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ನೂತನ ಗಣೇಶ ಮೂರ್ತಿಯ ಪ್ರತಿಷ್ಠಾಪನೆ ನೆರವೇರಿಸಿದರು. ಇದೇ ವೇಳೆ ಅನ್ನ ದಾಸೋಹದ ನೂತನ ಕಟ್ಟಡ ನಿರ್ಮಾಣಕ್ಕೂ ಶ್ರೀಗಳು ಭೂಮಿ ಪೂಜೆ ಮಾಡಿ, ಕಾಮಗಾರಿಗೆ ಚಾಲನೆ ನೀಡಿದರು. ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಸೇರಿದಂತೆ ಎಲ್ಲಾ ಟ್ರಸ್ಟಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

## ನಗರದಲ್ಲಿ ಇಂದು ರಿಟೇಲ್ ಸಾಲ ಮೇಳ

ಕರ್ನಾಟಕ ಗ್ರಾಮೀಣ ಬ್ಯಾಂಕ್ ದಾವಣಗೆರೆ ಪ್ರಾದೇಶಿಕ ಕಚೇರಿ ವತಿಯಿಂದ ಇಂದು ಬೆಳಿಗ್ಗೆ 10 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ರಿಟೇಲ್ ಸಾಲ ಮೇಳವನ್ನು ಆಯೋಜಿಸಲಾಗಿದೆ. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಎಸ್.ಕೆ.ಭಾಗ್ಯರೇಖಾ, ನಿಂಗೇಗೌಡ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವ್ಯವಸ್ಥಾಪಕ ಜಿ.ಸಿ.ಪ್ರಕಾಶ್, ಇಂಡಿಯನ್ ಕಾಂಕ್ರೀಟ್ ಇನ್ಸ್‌ಸ್ಟಿಟ್ಯೂಟ್ ಕಾರ್ಯದರ್ಶಿ ಜಿ.ಬಿ. ಸುರೇಶ್ ಮತ್ತಿತರರು ಭಾಗವಹಿಸಲಿದ್ದು, ದಾವಣಗೆರೆ ಪ್ರಾದೇಶಿಕ ವ್ಯವಸ್ಥಾಪಕ ಪ್ರವೀಣ್ ಕುಮಾರ್ ಪ್ರಭಾಕರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹಿರಿಯ ವ್ಯವಸ್ಥಾಪಕ ಸಿ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ಪೊಲೀಸ್ ಕ್ರೀಡಾಕೂಟ

ಜಿಲ್ಲಾ ಪೊಲೀಸ್ ವತಿಯಿಂದ ವಾರ್ಷಿಕ ಕ್ರೀಡಾಕೂಟವು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಉದ್ಘಾಟನೆಯನ್ನು ರಾಯಚೂರು ತಾಲ್ಲೂಕು ಯರಮರಸ್ ಗ್ರಾಮದವರಾದ ಖೋ-ಖೋ ರಾಷ್ಟ್ರೀಯ ಕ್ರೀಡಾಕೂಟು ಅರ್ಜುನ್ ನೆರವೇರಿಸುವರು.

ನಾಡಿದ್ದು ದಿನಾಂಕ 22 ರ ಬುಧವಾರ ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಮಾನ್ಯ ಪೊಲೀಸ್ ಉಪ ಮಹಾ ನಿರೀಕ್ಷಕರಾದ ಡಾ. ಕೆ. ತ್ಯಾಗರಾಜನ್ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ. ಸಂತೋಷ ಮತ್ತು ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಉಪಸ್ಥಿತರಿರುವರು.

## ನಗರದಲ್ಲಿ ಇಂದು ಶ್ರೀ ಲಿಂಗೇಶ್ವರ ದೇವಸ್ಥಾನದ ಕಳಸಾರೋಹಣ



ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮವು ಇಂದು ಅಪರಾಹ್ನ 12.30ಕ್ಕೆ ನಡೆಯಲಿದೆ.ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿ ಕಳಸಾರೋಹಣವನ್ನು ನೆರವೇರಿಸುವರು. ಸದ್ಭಕ್ತರು ಭಾಗವಹಿಸುವಂತೆ ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದ ಸಂಘ ಕೋರಿದೆ.

# ಕೊಳಗೇರಿಗೆ ಸೌಕರ್ಯ ಕೊಟ್ಟರೆ ದೇಶವೇ ಅಭಿವೃದ್ಧಿ

ದಾವಣಗೆರೆ, ನ.19- ಶೋಷಿತರು, ದಮನಿತರು ವಾಸಿಸುವ ಕೊಳೆಗೇರಿಗಳು ಅಭಿವೃದ್ಧಿಯಾದರೆ ಮಾತ್ರ ದೇಶ ಅಭಿವೃದ್ಧಿಯಾದಂತೆ ಎಂದು ವಕೀಲರ ಸಂಘದ ಅಧ್ಯಕ್ಷರೂ ಆದ ಹಿರಿಯ ವಕೀಲ ಎಲ್.ಎಚ್. ಅರುಣಕುಮಾರ್ ಪ್ರತಿಪಾದಿಸಿದರು.

ನಗರದ ರೋಟರಿ ಬಾಲಭವನದಲ್ಲಿ ಶನಿವಾರ ಸ್ಲಂ ಜನಾಂದೋಲನ-ಕರ್ನಾಟಕ, ಸಾವಿತ್ರಿ ಬಾಯಿ ಪುಲೆ ಮಹಿಳಾ ಸಂಘಟನೆ ಜಿಲ್ಲಾ ಘಟಕದಿಂದ ಮಹಿಳೆಯರಿಗೆ ಇರುವ ಕಾನೂನುಗಳ ಬಗ್ಗೆ ಅರಿವು ಕಾರ್ಯಕ್ರಮ ಉದ್ಘಾಟಿಸಿ, ಪ್ರತಿಜ್ಞಾ ವಿಧಿ ಬೋಧಿಸಿ ಅವರು ಮಾತನಾಡಿದರು.

ಕೊಳಗೇರಿಗಳಿಗೆ ಮೂಲ ಸೌಕರ್ಯ ಕಲ್ಪಿಸಿ, ಅಭಿವೃದ್ಧಿ ಪಡಿಸಿದಾಗ ಮಾತ್ರ ದೇಶ ಅಭಿವೃದ್ಧಿ ಹೊಂದಿದಂತೆ ಎಂದರು. ಸ್ಲಂಗಳಲ್ಲಿ ವಾಸಿಸುವ ಜನರಿಗೆ ಸರ್ಕಾರ ಸಾಕಷ್ಟು ಸೌಲಭ್ಯ ನೀಡುತ್ತಿದ್ದು, ಕೊಳಗೇರಿಗಳಿಗೆ ಮತ್ತಷ್ಟು ಮೂಲಸೌಕರ್ಯ ಕಲ್ಪಿಸಬೇಕಿದೆ. ಶಾಲೆ, ವಸತಿ, ನೀರು, ಶಿಕ್ಷಣವನ್ನು ಜನರಿಗೆ ಸಮರ್ಪಕವಾಗಿ ತಲುಪಿಸಲು ಸ್ಲಂ ಜನಾಂದೋಲನ ಹಾಗೂ ಸಾವಿತ್ರಿ ಬಾಪುಲೆ ಸಂಘಟನೆಗಳು ಕೆಲಸ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಹೇಳಿದರು.



ದೇಶದ ಪ್ರತಿಯೊಬ್ಬರಿಗೂ ಸಂವಿಧಾನಬದ್ಧ ಹಕ್ಕುಗಳಿದ್ದು, ನಮಗೆ ನೀಡಿದ ಹಕ್ಕು, ಕಾನೂನುಗಳ ಬಗ್ಗೆ ನಮಗೆ ಅರಿವು ಇರಬೇಕು. ಮಹಿಳೆಯರ ಪರವಾಗಿ ಸಾಕಷ್ಟು ಕಾನೂನು ಇದೆ. ಯಾರಿಗೆ ಯಾವುದೇ ಸಮಸ್ಯೆ, ತೊಂದರೆಯಾದರೂ ಕಾನೂನು ನೆರವಿನ ಅಗತ್ಯವಿದ್ದರೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಭೇಟಿ ನೀಡಿ, ಉಚಿತವಾಗಿ ಕಾನೂನು ನೆರವು ಪಡೆಯಬಹುದು ಎಂದು ತಿಳಿಸಿದರು.

ಪುರುಷ ಪ್ರಧಾನ ಸಮಾಜವೆಂಬ ಧೋರಣೆ ಹಿಂದಿನಿಂದಲೂ ಬೇರು ಬಿಟ್ಟಿದೆ. ಮೊದಲು ಮನುಷ್ಯರಲ್ಲಿ ಇರುವ ಅಂತಹ ಮನಃಸ್ಥಿತಿ ಬದಲಾವಣೆಯಾಗಬೇಕು. ಗಂಡು, ಹೆಣ್ಣು ಸಮಾನವೆಂಬುದು ಎಲ್ಲರೂ ಅರಿಯಬೇಕು. ಮಹಿಳೆಯರು ಮತ್ತು ಮಕ್ಕಳು ಸಮಾಜದಲ್ಲಿ ನಿರಂತರ ಶೋಷಣೆಗೊಳಗಾಗುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಬೇಕು. ಆಗ ಮಾತ್ರ ನೀವು ಜಾಗೃತರಾಗಿ ಶೋಷಣೆ ತಡೆಯುವಲ್ಲಿ ಸಫಲರಾಗುತ್ತೀರಿ ಎಂದು ಕಿವಿಮಾತು ಹೇಳಿದರು.

ನಿವೃತ್ತ ಅಭಿಯಂತರ ಎಸ್.ಎಲ್. ಆನಂದಪ್ಪ ಮಾತನಾಡಿ, ಎಲ್ಲಿಯವರೆಗೆ ಕಾನೂನು ಅರಿವು ನಮಗೆ ಇರುವುದಿಲ್ಲವೋ ಅಲ್ಲಿಯವರೆಗೂ ನಿಮ್ಮ ಮೇಲೆ ದೌರ್ಜನ್ಯ ನಡೆಯುತ್ತಲೇ ಇರುತ್ತದೆ. ಪ್ರತಿಯೊಬ್ಬರೂ ಕಾನೂನಿನ ಬಗ್ಗೆ ಕನಿಷ್ಠ ಅರಿವು ಹೊಂದಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಮುಖ್ಯವಾಹಿನಿಗೆ ತರಬೇಕು. ದಾವಣಗೆರೆಯ ಸ್ಲಂಗಳಲ್ಲಿ 13685 ಕುಟುಂಬಗಳು ನಿವೇಶನ ರಹಿತರಿದ್ದು, ಮುಂದಿನ ದಿನಗಳಲ್ಲಿ ಸ್ವಂತ ನಿವೇಶನಕ್ಕಾಗಿ ಡಿಸಿ ಕಚೇರಿ ಎದುರು ಧರಣಿ ನಡೆಸಲು ಸಿದ್ಧರಾಗಿ ಎಂದು ಕರೆ ನೀಡಿದರು.


ಸ್ಲಂ ಜನಾಂದೋಲನದ ಅಧ್ಯಕ್ಷ ಎಂ. ಶಬ್ಬೀರ್ ಸಾಬ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ರೇಣುಕಾ ಯಲ್ಲಮ್ಮ, ಹಿರಿಯ ವಕೀಲರಾದ ಬಿ.ಎಂ. ಹನುಮಂತಪ್ಪ, ಟಿ.ಎಂ. ಅನ್ನಪೂರ್ಣ, ನಿವೇಶನ ರಹಿತರ ಹೋರಾಟ ಸಮಿತಿ ಅಧ್ಯಕ್ಷರಾದ ಮಂಜುಳಾ, ಮಂಡಕ್ಕಿ ಭಟ್ಟಿಗಳ ಸಂಘದ ಮಾಜಿ ಅಧ್ಯಕ್ಷ ಮಹಮ್ಮದ್ ಹರ್ಷದ್ ಇತರರಿದ್ದರು.

### ಕಾನೂನಿನ ವ್ಯಾಪ್ತಿಯಲ್ಲಿ ನ್ಯಾಯ

ಸರ್ಕಾರದ ಯಾವುದೇ ಇಲಾಖೆಯಿಂದ ನಿಮ್ಮ ಕೆಲಸ ಆಗದಿದ್ದರೆ, ವಿಳಂಬವಾಗುತ್ತಿದ್ದರೆ ಅಂತಹ ಇಲಾಖೆಗೆ ಸಂಪರ್ಕಿಸಿ. ನಿಮಗೆ ನ್ಯಾಯ ಕೊಡಿಸುವ ಕೆಲಸ ಹಾಗೂ ನಿಮ್ಮ ವೈಯಕ್ತಿಕ ಸಮಸ್ಯೆಗಳಾದ ಆಸ್ತಿಪಾಲು, ಜೀವನಾಂಶ ಸೇರಿದಂತೆ ಅನೇಕ ಸಮಸ್ಯೆಗಳಿಗೆ ಕಾನೂನಿನ ವ್ಯಾಪ್ತಿಯಲ್ಲಿ ನ್ಯಾಯ ಕೊಡಿಸುವ ಕೆಲಸವನ್ನು ಕಾನೂನು ಸೇವಾ ಪ್ರಾಧಿಕಾರಗಳು ಮಾಡುತ್ತವೆ.

**- ಎಲ್.ಎಚ್. ಅರುಣಕುಮಾರ್,**
ಜಿಲ್ಲಾ ವಕಿಲರ ಸಂಘದ ಅಧ್ಯಕ್ಷ

# 'ಆಕಾಶಕ್ಕೆ ಏಣಿ' – ವೈಶಿಷ್ಟ್ಯ ಪೂರ್ಣ ಕೃತಿ




ಒಬ್ಬ ಲೇಖಕ ದೀರ್ಘ ಕಾಲಾವಧಿಯಲ್ಲಿ ಬರೆದ ಸಾಂದರ್ಭಿಕ ಲೇಖನಗಳನ್ನು ಒಂದೆಡೆ ಸಂಕಲಿಸಿ, ಪ್ರಕಟಿಸುವ ಪರಿಪಾಠ ಎಲ್ಲಾ ಭಾಗಗಳಲ್ಲೂ ಕಂಡು ಬರುವ ವಿದ್ಯಮಾನ. ಕನ್ನಡದಲ್ಲಿ ಈ ಕೆಲಸ ಮೊದಲಿನಿಂದಲೂ ನಡೆದುಕೊಂಡು ಬಂದಿದ್ದು, ಈ ಪ್ರಕಾರದಲ್ಲಿ ಪ್ರಕಟಗೊಂಡಿರುವ ಖ್ಯಾತ ನಾಮರ ಕೃತಿಗಳು ಅಸಂಖ್ಯಾತ. ಇವುಗಳ ಸಾಲಿಗೆ ಇದೀಗ ಸೇರ್ಪಡೆಗೊಳ್ಳುತ್ತಿರುವುದು ಹಿರಿಯ ಪತ್ರಕರ್ತ ವಿ. ಹನುಮಂತಪ್ಪನವರ ಕೃತಿ 'ಆಕಾಶಕ್ಕೆ ಏಣಿ'. 1953ರ ಮೇ 29 ರಂದು ತೇನ್‌ಸಿಂಗ್ ಮತ್ತು ಹಿಲರಿ ವಿಶ್ವದ ಅತಿ ಎತ್ತರದ ಪರ್ವತ ಶಿಖರ ಮೌಂಟ್ ಎವರೆಸ್ಟ್ ಅನ್ನು ಏರಿದ ರೋಚಕ ವಿವರಗಳುಳ್ಳ ಲೇಖನದ ಶೀರ್ಷಿಕೆಯನ್ನೇ ಹನುಮಂತಪ್ಪನವರು ಕೃತಿಗೆ ಆಯ್ಕೆ ಮಾಡಿಕೊಂಡಿದ್ದಾರೆ. ಇದು ಕೃತಿಯ ಒಟ್ಟಾರೆ ಆಶಯವನ್ನೂ ಧ್ವನಿಸುವಂತಿದೆ.

ಈ ಲೇಖನಗಳ ಕಾಲದ ಹರವು ದೊಡ್ಡದು. 1982 ರಿಂದ 2022 ರ ವರೆಗಿನ ನಲವತ್ತು ವರ್ಷಗಳಲ್ಲಿ ಲೇಖಕರು ನಾಡಿನ ಪ್ರಸಿದ್ಧ ಪತ್ರಿಕೆಗಳಿಗೆ ಬರೆದ 37 ಲೇಖನಗಳು ಇದರಲ್ಲಿ ಒಟ್ಟುಗೂಡಿವೆ. ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಈ ಪತ್ರಿಕಾ ಬರಹಗಳ ವೈವಿಧ್ಯತೆ ಬೆರಗುಗೊಳಿಸುವಂತಿದೆ. ಇಲ್ಲಿ ಹೈದರಾಬಾದ್‌ನ ಸಾಲಾರ್ ಜಂಗ್ ಮ್ಯೂಸಿಯಂ, ಸಂತೇಬೆನ್ನೂರು ಪುಷ್ಕರಣಿ, ಲಂಡನ್‌ನ ಆರ್ಬಿಟ್ ಹೌಸ್, ಭುವನಗಿರಿ ಮುಂತಾದವುಗಳ ಪರಿಚಯದ ಜೊತೆಗೆ ಎಸ್. ನಿಜಲಿಂಗಪ್ಪ, ಲೇಡಿ ಡಾನ್ ಜಿನಬಾಯಿ ಖಬ್ರಿ, ಸಿ.ಎನ್.ಕೆ. ಇತ್ಯಾದಿ ವ್ಯಕ್ತಿ ಚಿತ್ರಗಳೂ ಸ್ಕಾಟ್‌ಲ್ಯಾಂಡ್ ಯಾರ್ಡ್, ಇಂಟರ್‌ಪೋಲ್, ಡಾಬರ್ ಮುಂತಾದ ಸಂಸ್ಥೆಗಳ ವಿವರಗಳೂ ಇಲ್ಲಿ ಸಂಕಲಿತವಾಗಿವೆ. ಈಗಾಗಲೇ 'ನನ್ನ ಕಣಗಲಕ್ಕೆ ಸಾಧಕರು', 'ಅಕ್ಷರ ಯೋಧ ರಾಮೋಜಿರಾವ್', 'ಸ್ವರ ಸಾಮ್ರಾಟ ಎಸ್.ಪಿ. ಬಾಲಸುಬ್ರಹ್ಮಣ್ಯಂ' ಸೇರಿದಂತೆ ಹಲವು ಪ್ರಸಿದ್ಧ ಕೃತಿಗಳನ್ನು ಹೊರತಂದಿರುವ ಹನುಮಂತಪ್ಪನವರ ಕುಶಲ ಕಸುಬುದಾರಿಕೆ ಅವರ ಈ ಎಲ್ಲಾ ಲೇಖನಗಳಲ್ಲಿಯೂ ಎದ್ದು ಕಾಣುತ್ತದೆ.

ದಾವಣಗೆರೆಯ ಅಪೂರ್ವ ಕ್ಯಾಕ್ಟಸ್-ನಾಣ್ಯ-ನೋಟು-ಅಂಚೆ ಚೀಟಿಗಳ ಭಂಡಾರ, ಅನಾಥ ಹೆಣ್ಣುಮಕ್ಕಳ ಆಸರೆ 'ರಶ್ಮಿ' ಮುಂತಾದವುಗಳ ಕುರಿತ ಉಪಯುಕ್ತ ಮಾಹಿತಿಗಳಲ್ಲದೆ, ಹುಟ್ಟಿದ ಹೆಣ್ಣು ಮಕ್ಕಳನ್ನು ಕೊಲ್ಲುವ ರಾಜಸ್ತಾನದ ದುಷ್ಟ ಕುಲಾಚಾರಗಳ ಕರುಣಾಜನಕ ಕತೆಯೂ ಇಲ್ಲಿ ಉಂಟು.



ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಐತಿಹಾಸಿಕ ಸ್ಥಳಗಳ ಪರಿಚಯದ ಜೊತೆಗೆ ಗೀತಗೋವಿಂದ ಜಯದೇವ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಕಡಕೋಳ ಮಡಿವಾಳಪ್ಪ ಮುಂತಾದವರ ಕುರಿತು ಇರುವ ನುಡಿ ಚಿತ್ರಗಳು ಗಮನ ಸೆಳೆಯುತ್ತವೆ.

ಶತಮಾನದ ಹಿಂದಿನ ಒಂದು ಮಾಸಿಕ 'ಕನ್ನಡನುಡಿಗನ್ನಡಿ'ಯಲ್ಲಿ ಲೇಖಕರು ಕನ್ನಡ ಪತ್ರಿಕೋದ್ಯಮದ ಆರಂಭಿಕ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಇದರಲ್ಲಿನ ಹಲವು ಸಂಗತಿಗಳು ಅತ್ಯಂತ ಕುತೂಹಲಕರವೂ, ಆಸಕ್ತಿದಾಯಕವೂ ಆಗಿವೆ. (ಬ್ರಿಟಿಷ್ ಚಕ್ರವರ್ತಿಯನ್ನು ಹೊಗಳುವ ಶ್ಲೋಕ, ಮೈಸೂರು ಅರಮನೆಗೆ ಬೆಂಕಿ, ಪತ್ರಿಕೆಯ ವಾಗ್ದಾನ, ಗಡಿಯಾರ ಕಂಪೆನಿಯ ಜಾಹೀರಾತು).

'ಸಿಯಾಚಿನ್: ಯೋಧರಿಗೆ ಪ್ರತಿದಿನ ಪುನರ್ಜನ್ಮ' ಕೃತಿಯ ಮತ್ತೊಂದು ಗಮನಾರ್ಹ ಲೇಖನ. ಇದರಲ್ಲಿ ದೇಶದ ವಾಯುವ್ಯ ಗಡಿಯಲ್ಲಿ ಮೈನಸ್ ಅರವತ್ತು ಡಿಗ್ರಿಯ ನಡುಗಿಸುವ ತೀವ್ರ ಚಳಿಯಲ್ಲಿ ನಮ್ಮ ಸೈನಿಕರು ಅನುಭವಿಸುವ ಎದೆ ನಡುಗಿಸುವಂತಹ ಕಠಿಣ ದಿನಚರಿಯ ವಿವರಗಳಿವೆ. ಹನುಮಂತಪ್ಪನವರು ಇದರಲ್ಲಿ ಟೀ ತಯಾರಿ, ಶತ್ರುವಾಗುವ ವಾತಾವರಣ, ಉಸಿರಾಟದ ತೊಂದರೆ, ಹೆಲಿಕಾಪ್ಟರ್ ಇಳಿಯಲು ಬೋರ್ನ್‌ವಿಟಾ! ಮುಂತಾದವುಗಳನ್ನು ವಿವರಿಸಿರುವ ಪರಿ ವಿಶಿಷ್ಟ.

ಕುತೂಹಲ ತುಂಬಿದ ಈ ಲೇಖನಗಳ ವೈಶಿಷ್ಟ್ಯತೆ ಇರುವುದು ಅವುಗಳ ನಿಖರತೆ, ವಸ್ತುನಿಷ್ಠತೆ, ವಿಷಯ ಸ್ಪಷ್ಟತೆ, ಸಂಕ್ಷಿಪ್ತತೆ ಮತ್ತು ಲವಲವಿಕೆಯ ಬರೆವಣಿಗೆಯಲ್ಲಿ. ಇವು ಪತ್ರಿಕಾ ಲೇಖನಗಳ ವಿಶಿಷ್ಟ ಗುಣಲಕ್ಷಣಗಳಲ್ಲವೇ?

ಹನುಮಂತಪ್ಪನವರ ಪತ್ರಿಕಾರಂಗದ ಅನುಭವ, ಅಧ್ಯಯನ ಶೀಲತೆಗಳು ಅವರ ಈ ಲೇಖನಗಳಲ್ಲಿ ಢಾಳಾಗಿ ಎದ್ದು ಕಾಣುತ್ತವೆ. ಅವರು ಕೇವಲ ಪತ್ರಕರ್ತರಷ್ಟೇ ಆಗಿರದೆ, ಸಾಹಿತಿಯೂ ಆಗಿರುವುದರಿಂದ ಶುಷ್ಕ ವರದಿಗಳಾಗಬಹುದಾಗಿದ್ದ ಅವರ ಈ ಬರಹಗಳು ಸಾಹಿತ್ಯದ ಸ್ಪರ್ಶದಿಂದಾಗಿ ಸುಂದರವಾಗಿ ಕಂಗೊಳಿಸುತ್ತವೆ.

ಉಪಯೋಗಿಸಿರುವ ಗುಣಮಟ್ಟದ ಚಿತ್ರಗಳು ಪುಸ್ತಕದ ಅಂದಚಂದವನ್ನು ಹೆಚ್ಚಿಸಿವೆ. ಇನ್ನೂ ಹೆಚ್ಚು ಗಮನ ಹರಿಸಿದ್ದರೆ, ಸುಂದರ ಮುಖದ ದೃಷ್ಟಿ ಬೊಟ್ಟಿನಂತೆ ಅಲ್ಲಲ್ಲಿ ಇಣುಕಿರುವ ಕೆಲವು ಮುದ್ರಣ ದೋಷಗಳನ್ನು ನಿವಾರಿಸಬಹುದಿತ್ತು.

ಆಸಕ್ತ ಓದುಗರಿಗೆ ಮಾಹಿತಿ ಕಣಜವಾಗಿರುವ ಈ ಲೇಖನಗಳ ಮಾಹಿತಿ ಸಂಗ್ರಹಣೆ ಹಿಂದಿರುವ ಹನುಮಂತಪ್ಪನವರ ಶ್ರಮ ಪ್ರಶಂಸನೀಯ. ಈ ಲೇಖನಗಳನ್ನು ಅವರು ನಾಲ್ಕು ದಶಕಗಳ ನಂತರ ಬಯಲಾದ 'ಅಕ್ಷರ ನಿಧಿ' ಎಂದು ಕರೆದಿರುವುದೂ, ಬೆನ್ನುಡಿಯಲ್ಲಿ ಡಾ|| ಬಾಬು ಕೃಷ್ಣಮೂರ್ತಿ ಅವರು 'ಇಲ್ಲಿನ ಲೇಖನಗಳು ಜ್ಞಾನದಾಹಿಗಳ ಹಸಿವನ್ನು ತಣಿಸುವ ಟಾನಿಕ್‌ನಂತಿವೆ' ಎಂದು ಹೇಳಿರುವುದೂ ಉತ್ಪ್ರೇಕ್ಷೆಯ ಮಾತಲ್ಲ.

**- ಪ್ರೊ. ಎಸ್.ಬಿ. ರಂಗನಾಥ್**
ನಿವೃತ್ತ ಪ್ರಾಂಶುಪಾಲರು, ದಾವಣಗೆರೆ.

## ಕಡ್ಲೇಬಾಳು ಶ್ರೀ ನಾಗಸುಬ್ರಹ್ಮಣೇಶ್ವರ ದೇವಾಲಯದಲ್ಲಿ ನ.24 ರಿಂದ 30 ರವರೆಗೆ ಮಹಾಯಾಗ ಕಾರ್ಯಕ್ರಮ





ದಾವಣಗೆರೆ, ನ. 19- ತಾಲ್ಲೂಕಿನ ಕಡ್ಲೇಬಾಳು ಗ್ರಾಮದಲ್ಲಿರುವ ಶ್ರೀ ನಾಗಸುಬ್ರಹ್ಮಣೇಶ್ವರ ಸ್ವಾಮಿ ದೇವಾಲಯದಲ್ಲಿ ದಿನಾಂಕ 24ನೇ ಶುಕ್ರವಾರದಿಂದ ದಿನಾಂಕ 30ರ ಗುರುವಾರದವರೆಗೆ ಶ್ರೀ ನಾಗಸುಬ್ರಹ್ಮಣೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಚತುರ್ವೇದಪಾರಾಯಣ ಋಗ್ವೇದ ಸಂಹಿತ ಮಹಾಯಾಗ ಮತ್ತು ಶ್ರೀಮದ್ ಭಾಗವತ ಪಾರಾಯಣ ನಡೆಯಲಿದೆ.

ಶ್ರೀ ಸದ್ಗುರು ಕೃಪಾ ಭವನದ ದೇವರಹಟ್ಟಿಯ ಶ್ರೀ ಕ್ಷೇತ್ರ ಸ್ವರ್ಣವಲ್ಲಿ ಸೇವಾ ಮಹಾ ಸಂಸ್ಥಾನದಿಂದ ಪ್ರಧಾನ ಆಚಾರ್ಯ ನೇತೃತ್ವದಲ್ಲಿ ಈ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಕಡ್ಲೇಬಾಳು ಶ್ರೀ ನಾಗಸುಬ್ರಹ್ಮಣೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಪಾದ ದೇಶಪಾಂಡೆ ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀ ಕಟ್ಟೆ ದುರುಗಮ್ಮದೇವಿ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ



ಶ್ರೀ ಕಟ್ಟೆ ದುರುಗಮ್ಮದೇವಿ ದೇವಸ್ಥಾನ ಜೀರ್ಣೋದ್ಧಾರ ಟ್ರಸ್ಟ್ ವತಿಯಿಂದ ಹೊಂಡದ ರಸ್ತೆಯ ಶ್ರೀ ಕಟ್ಟೆ ದುರುಗಮ್ಮ ದೇವಿ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ನೂತನ ದೇವಸ್ಥಾದ ಉದ್ಘಾಟನೆ ಹಾಗೂ ಕಳಸಾರೋಹಣವು ಇಂದು ಮತ್ತು ನಾಳೆ ನಡೆಯಲಿದೆ.

ಇಂದು ಸಂಜೆ 6-30ಕ್ಕೆ ಶಂಕರ ನಾರಾಯಣ ಶಾಸ್ತ್ರಿ ಇವರ ಪೌರೋಹಿತ್ಯದಲ್ಲಿ ಹೋಮ, ಹವನ ಇರುತ್ತದೆ. ರಾತ್ರಿ 10ರಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪುರಾಣಿಕ ಕೆ. ರೇವಣಪ್ಪ (ದೊಡ್ಡಬಾತಿ) ಇವರಿಂದ ದೇವಿಯ ಪ್ರವಚನ ಇರುತ್ತದೆ.

ನಾಳೆ ಬೆಳಿಗ್ಗೆ 5 ಗಂಟೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಆವರಗೊಳ್ಳ ಪುರವರ್ಗ ಮಠ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳವರಿಂದ ದೇವಿಯ ಪ್ರಾಣ ಪ್ರತಿಷ್ಠಾಪನೆ ನೆರವೇರಲಿದೆ.

ನೂತನ ದೇವಸ್ಥಾನವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸುವರು. ಕಳಸಾರೋಹಣವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ಮಹಾಪೌರರಾದ ವಿನಾಯಕ ಪೈಲ್ವಾನ್, ವಾರ್ಡ್ ಸದಸ್ಯ ಶಾಂತಕುಮಾರ್ ಸೋಗಿ ಭಾಗವಹಿಸಲಿದ್ದಾರೆ.

ನಂತರ ಮಧ್ಯಾಹ್ನ 12 ರಿಂದ ಪ್ರಸಾದದ ವ್ಯವಸ್ಥೆ ಇರುತ್ತದೆ ಎಂದು ದೇವಸ್ಥಾನ ಜೀರ್ಣೋದ್ಧಾರ ಟ್ರಸ್ಟ್ ಅಧ್ಯಕ್ಷ ಕೆ.ಎಸ್. ಶಂಕರಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಸತ್ಯಸಾಯಿ ಬಾಬಾರವರ 98ನೇ ಜನ್ಮ ದಿನೋತ್ಸವ



ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆಶ್ರಯದಲ್ಲಿ ಶ್ರೀ ಸತ್ಯಸಾಯಿ ಬಾಬಾರವರ 98ನೇ ಜನ್ಮ ದಿನೋತ್ಸವದ ಅಂಗವಾಗಿ ಕಾರ್ಯಕ್ರಮ ನಡೆಯಲಿದೆ. ಇಂದು ಬೆಳಿಗ್ಗೆ 11 ಗಂಟೆಗೆ 'ಸೇವಾನಿಕೇತನ ಶಾಲೆಯ (ಬುದ್ಧಿ ಮಾಂದ್ಯ ಮಕ್ಕಳಿಗೆ) ವಿದ್ಯಾರ್ಥಿಗಳಿಗೆ ಆಟೋಪಕರಣಗಳ ವಿತರಣೆ, ನಾಳೆ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ವೀರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳಿಗೆ ಆಹಾರ ಪದಾರ್ಥಗಳು ಮತ್ತು ಪ್ರಸಾದ ವಿತರಣೆ ಹಮ್ಮಿಕೊಳ್ಳಲಾಗಿದೆ.

ಸೇವಾ ಕಾರ್ಯಗಳ ನಿರ್ವಹಣೆಯನ್ನು ಶ್ರೀಮತಿ ರಂಜನಿ, ರವಿ ಕೆ., ನಾಗರಾಜ್ ಉತ್ತಂಗಿ, ಪ್ರಸನ್ನ ಎಂ. ನಿರ್ವಹಿಸುವರು.

### ಐ.ಎ.ಎಸ್, ಕೆ.ಎ.ಎಸ್ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ನ. 19 - ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಮೈಸೂರಿನ ಕೇಂದ್ರ ಕಚೇರಿಯಲ್ಲಿ ಕೇಂದ್ರ ಲೋಕ ಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನಡೆಸಲಾಗುವುದು. ಇದೇ ದಿನಾಂಕ 24 ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸಂಪರ್ಕಿಸಿ ದೂ.ಸಂ: 0821-2515944.

## ಝಾನ್ಸಿರಾಣಿ ಲಕ್ಷ್ಮಿಬಾಯಿ ವೇಷದಲ್ಲಿ ಶ್ರೀದೃತಿ ಸಿ.ಆರ್



ದಾವಣಗೆರೆ, ನ. 19 - ವೀರ ಮಹಿಳೆ ಝಾನ್ಸಿರಾಣಿ ಲಕ್ಷ್ಮೀ ಬಾಯಿ ಜನ್ಮದಿನದ ಅಂಗವಾಗಿ ನಗರದ ಪಿ. ಜೆ. ಬಡಾವಣೆಯ ಡಾ. ಎಂ. ಎಸ್. ರಮೇಶ್ ಪ್ರಿಯಾಂಕ ದಂಪತಿ ಮಗಳು ಕು. ಸಿ. ಆರ್. ಶ್ರೀದೃತಿ ಝಾನ್ಸಿರಾಣಿ ವೇಷ ಧರಿಸಿ ಕಣ್ಮನ ಸೆಳೆದಳು.

## ಜಾನಪದ, ಬೀದಿ ನಾಟಕ, ಕಲಾವಿದರ ತರಬೇತಿ

ದಾವಣಗೆರೆ, ನ. 19 - ಆರೋಗ್ಯ ಇಲಾಖೆಯಿಂದ ಯೋಜನೆಗಳ ಪ್ರಚಾರಕ್ಕಾಗಿ ಬೆಂಗಳೂರು ವಿಭಾಗ ಮಟ್ಟದ ಜಾನಪದ, ಬೀದಿ ನಾಟಕ ಕಲಾವಿದರಿಗೆ ತರಬೇತಿ ಕಾರ್ಯಾಗಾರವನ್ನು ಕೊಂಡಜ್ಜಿಯ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ನಾಡಿದ್ದು ದಿನಾಂಕ 22 ರಂದು ಬೆಳಿಗ್ಗೆ 11 ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್. ಷಣ್ಮುಖಪ್ಪ ತಿಳಿಸಿದ್ದಾರೆ.




### ಸಾರ್ವಜನಿಕರ ಮಾಹಿತಿಗಾಗಿ

ನನ್ನ ಕಕ್ಷಿದಾರರುಗಳಾದ (1) ಶ್ರೀಮತಿ ನೂರ್‌ಜಾನ್ ಕೋಂ ಲೇಟ್ ಭಕ್ಷಿ ಖಾನ್ (2) ಶ್ರೀಮತಿ ಮಹಬೂಬ್ ಬೀ ಕೋಂ ಲೇಟ್ ರಹಮತುಲ್ಲಾ (3) ಶ್ರೀಮತಿ ಷಂಷದ್ ಬಾನು ಕೋಂ ಸನಾವುಲ್ಲಾ (4) ಶ್ರೀಮತಿ ಶಬೀನ ಬಾನು ಕೋಂ ಷಫೀವುಲ್ಲಾ, ವಾಸ: ಜನತಾ ಕಾಲೋನಿ, 2ನೇ ಕ್ರಾಸ್, ಚಳ್ಳಕೆರೆ ಟೌನ್, ಚಿತ್ರದುರ್ಗ ಜಿಲ್ಲೆ ವಾಸಿಗಳಾದ ಇವರುಗಳು, ಮಾನ್ಯ ಪ್ರಿನ್ಸಿಪಲ್ ಸಿವಿಲ್ ಜಡ್ಜ್ (ಸೀನಿಯರ್ ಡಿವಿಜನ್), ದಾವಣಗೆರೆ ಇಲ್ಲಿ ಓ.ಎಸ್.ನಂ.369/2023 ರ ಮೂಲಕ ಒಟ್ಟು ಕುಟುಂಬದ ಸ್ವತ್ತುಗಳಲ್ಲಿ ಪಾಲನ್ನು ಕೋರಿ (1) ಶ್ರೀ ಅಲ್ಲಾಭಕ್ಷಿ ಖಾನ್ ಬಿನ್ ಲೇಟ್ ಅಂಗಡಿ ಇಮಾಂಖಾನ್ (2) ಶ್ರೀಮತಿ ಶಬಾನಾ ಕೋಂ ಮಹಮದ್ ಸಾದಿಕ್ (3) ಶ್ರೀಮತಿ ಮುಬೀನಾ ಕೋಂ ಮಹಮದ್ ಖಾನ್ (4) ಶ್ರೀ ಅಮ್ಜದ್ ಖಾನ್ ಬಿನ್ ಲೇಟ್ ಗಫರ್ ಖಾನ್ (5) ಶ್ರೀ ನೌಷದ್ ಖಾನ್ ಬಿನ್ ಲೇಟ್ ಗಫರ್ ಖಾನ್ (6) ಶ್ರೀಮತಿ ತಹಸೀನ ಕೋರಿ ಸಲೀಂ ಅಹಮದ್ (7) ಶ್ರೀ ಮಹಮದ್ ಖಾನ್ ಬಿನ್ ಗಫರ್ ಖಾನ್ (8) ಶ್ರೀ ಬಷೀರ್ ಖಾನ್ ಬಿನ್ ಲೇಟ್ ಅಂಗಡಿ ಇಮಾಂ ಖಾನ್ (9) ಶ್ರೀ ಹಬೀಬ್ ಖಾನ್ ಬಿನ್ ಲೇಟ್ ಅಂಗಡಿ ಇಮಾಂ ಖಾನ್, ವಿಳಾಸ: ಅಣಬೇರು ಗ್ರಾಮ, ಮಾಯಕೊಂಡ ಹೋಬಳಿ, ದಾವಣಗೆರೆ ತಾಲ್ಲೂಕು/ಜಿಲ್ಲೆ ಇವರುಗಳ ವಿರುದ್ಧ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಬಗ್ಗೆ ದಾವೆಯನ್ನು ಹೂಡಿರುತ್ತಾರೆ. ಮಾನ್ಯ ಘನ ನ್ಯಾಯಾಲಯವು ಷೆಡ್ಯೂಲ್ ಸ್ವತ್ತುಗಳನ್ನು ಯಾವುದೇ ರೀತಿಯಿಂದಲೂ ಪರಭಾರೆ, ವಗೈರೆ ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿರುತ್ತದೆ. ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಮೇಲ್ಕಂಡ ಕೇಸಿನ ಪ್ರತಿವಾದಿಯರ ಜೊತೆ ಯಾರಾದರೂ ಭೋಗ್ಯ / ಬಾಡಿಗೆ / ಖರೀದಿಸಿ, ಇನ್ನಿತರೆ ರೀತಿಯಲ್ಲಿ ವ್ಯವಹರಿಸಿದಲ್ಲಿ, ಪ್ರತಿವಾದಿಯರ ಜೊತೆ ವ್ಯವಹರಿಸಿದವರೇ ನೇರ ಹೊಣೆಗಾರರಾಗುತ್ತಾರೆಂದು ಈ ಮೂಲಕ ವಾದಿಯರ ಪರ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ.

**ಷೆಡ್ಯೂಲ್**

1) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಮಾಯಕೊಂಡ ಹೋಬಳಿ, ವಿಠಲಾಪುರ ಗ್ರಾಮದ ರಿ.ಸ.ನಂ.44/1 ವಿಸ್ತೀರ್ಣ 5 ಎಕರೆ ಜಮೀನಿಗೆ **ಚಕ್ಕುಬಂದಿ : ಪೂರ್ವಕ್ಕೆ** : ಹಯಾತ್ ಖಾನ್ ಇವರ ಜಮೀನು, **ಪಶ್ಚಿಮಕ್ಕೆ** : ಬಡಿಗೇರ ಪುಟ್ಟಣ್ಣನವರ ಜಮೀನು, **ಉತ್ತರಕ್ಕೆ** : ಹಳ್ಳ, **ದಕ್ಷಿಣಕ್ಕೆ** : ಗೋಮಾಳ, ಈ ಮಧ್ಯದ ಸ್ವತ್ತು.

2) ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು-1 ಹೋಬಳಿ, ನರಸೀಪುರ ಗ್ರಾಮದ ರಿ.ಸ.ನಂ.8 ವಿಸ್ತೀರ್ಣ 7 ಎಕರೆ 12 ಗುಂಟೆ ಜಮೀನಿಗೆ **ಚಕ್ಕುಬಂದಿ : ಪೂರ್ವಕ್ಕೆ** : ಗಣೇಶಪ್ಪ ಇವರ ಜಮೀನು, **ಪಶ್ಚಿಮಕ್ಕೆ** : ಹಳ್ಳಿ ಲೋಕಪ್ಪ ಇವರ ಜಮೀನು, **ಉತ್ತರಕ್ಕೆ** : ಹಳ್ಳ, **ದಕ್ಷಿಣಕ್ಕೆ** : ಕಾಲುವೆ, ಈ ಮಧ್ಯದ ಸ್ವತ್ತು.

3) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಮಾಯಕೊಂಡ ಹೋಬಳಿ, ಅಣಬೇರು ಗ್ರಾಮ ಪಂಚಾಯತಿ ನಂ.242/1 ಅಳತೆ: 60 x 100 ಅಡಿ ಅಳತೆಯ ವಾಸದ ಮನೆಗೆ **ಚಕ್ಕುಬಂದಿ : ಪೂರ್ವಕ್ಕೆ** : ಅಬ್ದುಲ್ ಸಲಾಂ ಇವರ ಮನೆ, **ಪಶ್ಚಿಮಕ್ಕೆ** : ಎಮ್ಮಿಗನೂರು ರಾಮಣ್ಣ ಇವರ ಮನೆ, **ಉತ್ತರಕ್ಕೆ** : ದಾರಿ, **ದಕ್ಷಿಣಕ್ಕೆ** : ಖಾಲಿ ನಿವೇಶನ, ಈ ಮಧ್ಯದ ಸ್ವತ್ತು.

**(ಕೆ.ಬಿ. ಶೈಲಶ್ರೀ) ವಕೀಲರು, ದಾವಣಗೆರೆ, ಮೊ : 9448658502**

## ಪಿ.ಎಂ. ವಿಶ್ವಕರ್ಮ ಯೋಜನೆ ಸದುಪಯೋಗಕ್ಕೆ ಕರೆ

**ಹರಿಹರ**

ಹರಿಹರ, ನ.19- ಭಾರತ ಸರ್ಕಾರದ ಹೊಸ ಪಿ.ಎಂ. ವಿಶ್ವಕರ್ಮ ಯೋಜನೆಯನ್ನು ದಿನಾಂಕ 17-9-23 ರಿಂದ ಜಾರಿಗೊಳಿಸಿದ್ದು, ಗ್ರಾಮ ಪಂಚಾಯತಿ ಮತ್ತು ನಗರ ಮಟ್ಟದಿಂದ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕುಶಲಕರ್ಮಿಗಳು http;//pmvishwarkarama.gov.in ವೆಬ್ ಸೈಟ್‌ನಲ್ಲಿ ಸಾಮಾನ್ಯ ಸೇವಾ ಕೇಂದ್ರದಲ್ಲಿ ನೋಂದಾಯಿಸಿಕೊಳ್ಳಲು ಪೌರಾಯುಕ್ತ ಐಗೂರು ಬಸವರಾಜ್ ತಿಳಿಸಿದ್ದಾರೆ.

ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಮೊದಲ ಬಾರಿಗೆ 1 ಲಕ್ಷ ಸಾಲ,18 ತಿಂಗಳೊಳಗೆ 1 ಲಕ್ಷ ಹಿಂತಿರುಗಿಸಿದರೆ 2 ಲಕ್ಷ ಸಾಲವನ್ನು ಶೇ 5 ರಷ್ಟು ಕಡಿಮೆ ಬಡ್ಡಿ ದರದಲ್ಲಿ ಪಡೆಯಬಹುದು, ಬ್ಯಾಂಕ್ ಗ್ಯಾರಂಟಿ ಇಲ್ಲ, ಜಿಎಸ್‌ಟಿ ನೋಂದಾಯಿತ ಅಂಗಡಿಗಳಲ್ಲಿ ಉಪಕರಣಗಳನ್ನು ಖರೀದಿಸಲು15 ಸಾವಿರ, 5 ದಿನಗಳ ತರಬೇತಿ ಇರುತ್ತದೆ.

ಬಡಿಗೆ ವೃತ್ತಿ, ದೋಣಿ ತಯಾರಿಸುವವರು, ಶಸ್ತ್ರ ತಯಾರಕರು, ಕಮ್ಮಾರ ವೃತ್ತಿ, ಕಲ್ಲುಕುಟಿಗ ವೃತ್ತಿ , ಬಟ್ಟೆ, ಚಾಪೆ, ಕಸ ಪೊರಕೆ ತಯಾರಕರು. ಗೊಂಬೆ, ಆಟಿಕೆ ತಯಾರಕರು, ಕ್ಷೌರಿಕ ವೃತ್ತಿ ಮಾಡುವವರು, ಸುತ್ತಿಗೆ, ಹೂಮಾಲೆ ತಯಾರಕರು, ಅಗಸರು, ಆಭರಣ ತಯಾರಕರು.

ಶಿಂಪಿಗೆ ಬಟ್ಟೆ ಹೊಲೆಯುವವರು, ಕುಂಬಾರ ವೃತ್ತಿ ಮಾಡುವವರು, ಮೀನು ಬಲೆ ಹೆಣೆಯುವವರು, ಶಿಲ್ಪಿ ಮೂರ್ತಿ ಕಲ್ಲಿನ ಕೆತ್ತನೆ, ಚಮ್ಮಾರ ಪಾದರಕ್ಷೆ, ಬೀಗ ತಯಾರಕರು, ಆಧಾರ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್, ವಾಸಸ್ಥಳ ಪ್ರಮಾಣ ಪತ್ರ, ದೂರವಾಣಿ ಸಂಖ್ಯೆ, ಇಮೇಲ್ ಐಡಿ, ಭಾವಚಿತ್ರ ವೃತ್ತಿಪರ ದಾಖಲೆ, ಬ್ಯಾಂಕ್ ಖಾತೆ, ಜಾತಿ-ಆದಾಯ ಪ್ರಮಾಣ ಪತ್ರ ಸೇರಿದಂತೆ ಅಗತ್ಯವಿರುವ ದಾಖಲೆಗಳನ್ನು ಕೊಟ್ಟು ಯೋಜನೆಯ ಲಾಭವನ್ನು ಪಡೆಯಬಹುದು ಎಂದು ಆಯುಕ್ತರು ತಿಳಿಸಿದ್ದಾರೆ.



**HARIHAR TALUK MSPC**
(Mahila Supplementary Nutrition Production and Training Centre)
Ujjani Siddeswara Rice Mill Compound, Mahajenahalli, Shivamogga Road,
Harihara-577601, Davanagere Dstrict

**INVITATION TO TENDER**

Quotations are invited from suppliers for Purchase of Raw Materials and packing materials for manufacturing and supply of Nutritious Food to the beneficiaries under ICDS Scheme.

**IMPORTANT DATES**

- Last date of submission of the duly filled quotation: 27.11.2023
- Last date for submission of samples : 27.11.2023
- Date of Opening Tenders: 28.11.2023, 11Am

Ujjani Siddeswara Rice Mill Compound, Mahajenahalli, Shivamogga Road, Harihara-577601, Davanagere Dstrict

Name : HARIHARA TALUK MSPC
Address : HARIHARA TALUK MSPC Mahila Supplementary and Production Ujjani Siddeswara Rice Mill Compound, Mahajenahalli, Shivamogga Road, Harihara-577601, Davanagere Dstrict
Phone No : 8870353373
Email Id:

The Society reserves the right to accept or reject any bid or all bids without assigning any reasons.



**HONNALI TALUK MSPC**
(Mahila Supplementary Nutrition Production and Training Centre)
APMC Yard Gowdon No 1 + 2 Nyamathi, HONNALI 577217, Davanagere District

**INVITATION TO TENDER**

Quotations are invited from suppliers for Purchase of Raw Materials and packing materials for manufacturing and supply of Nutritious Food to the beneficiaries under ICDS Scheme.

**IMPORTANT DATES**

- Last date of submission of the duly filled quotation: 27.11.2023
- Last date for submission of samples : 27.11.2023
- Date of Opening Tenders: 28.11.2023, 11Am

APMC Yard Gowdon No 1 + 2 Nyamathi, HONNALI 577217, Davanagere District

Name : HONNALI TALUK MSPC
Address : HONNALI TALUK MSPC Mahila Supplementary and Production APMC Yard Gowdon No 1 + 2 Nyamathi, HONNALI 577217, Davanagere District
Phone No : 8870353373
Email Id:

The Society reserves the right to accept or reject any bid or all bids without assigning any reasons.

## 'ಮೇರಾ ಮಿಟ್ಟಿ' ಕಾರ್ಯಕ್ರಮಕ್ಕೆ ಬಿ.ಎಸ್.ಸಿ. ಕಾಲೇಜು ವಿದ್ಯಾರ್ಥಿಗಳು



ದಾವಣಗೆರೆ, ನ. 19- ಇತ್ತೀಚೆಗಷ್ಟೇ ಪ್ರಧಾನಮಂತ್ರಿಗಳ ಆಶಯದಂತೆ ನವದೆಹಲಿಯಲ್ಲಿ ನಡೆದ 75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಕೊನೆಯ ಕಾರ್ಯಕ್ರಮ 'ಮೇರಾ ಮಿಟ್ಟಿ - ಮೇರಾ ದೇಶ' (ನನ್ನ ಮಣ್ಣು - ನನ್ನ ದೇಶ) ಎಂಬ ಕಾರ್ಯಕ್ರಮದಲ್ಲಿ ನಮ್ಮ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲು 'ನೆಹರು ಯುವ ಕೇಂದ್ರ' ಮತ್ತು 'ರಾಷ್ಟ್ರೀಯ ಸೇವಾ ಯೋಜನೆ' ವತಿಯಿಂದ ಆಯ್ಕೆಗೊಂಡ ನಗರದ ಬಿ.ಎಸ್. ಚನ್ನಬಸಪ್ಪ ಕಾಲೇಜಿನ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳಾದ ಆರ್.ಎಸ್. ಆಕರ್ಷ್, ಜಿ.ಕೆ. ಕರಿಬಸಪ್ಪ, ಎಂ.ಹೆಚ್. ನಿವೇದಿತ, ಜಿ.ಯು. ಪಲ್ಲವರಿ ಅವರನ್ನು ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್, ಪ್ರಾಂಶುಪಾಲ ಎಂ.ಸಿ. ಗುರು, ಎನ್ನೆಸ್ಸೆಸ್ ಅಧಿಕಾರಿ ಪಿ. ಅಣ್ಣೇಶ್ ಅಭಿನಂದಿಸಿದ್ದಾರೆ.

# ಸಹಕಾರಿ ಕ್ಷೇತ್ರಕ್ಕೆ ಸರ್ಕಾರದ ಬಲ ಅಗತ್ಯ : ಶಾಸಕ ಬಿ.ಪಿ. ಹರೀಶ್

ಹರಿಹರ, ನ.19- ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳು ದೇಶದಲ್ಲಿಯೇ ಸಹಕಾರಿ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿ ಬಲಿಷ್ಠವಾಗಿವೆ. ಇದಕ್ಕೆ ಕಾರಣ ಅಭಿವೃದ್ಧಿಯೇ ಮೂಲಮಂತ್ರವಾಗಿದ್ದು ಈ ದಿಕ್ಕಿನಲ್ಲಿ ನಮ್ಮ ರಾಜ್ಯದ ಸಹಕಾರಿಗಳು ಯೋಚಿಸುವುದು ಅವಶ್ಯಕವಾಗಿದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಗುರುಭವನದಲ್ಲಿ ಭಾನುವಾರ ನಡೆದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ರೈತರು ಹಾಗೂ ಬಡವರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಈ ಸಂಸ್ಥೆಗಳು ಪ್ರಮುಖ ವಹಿಸಿವೆ. ಸಹಕಾರಿ ಕ್ಷೇತ್ರಕ್ಕೆ ಆಳುವ ಸರ್ಕಾರಗಳು ಹೆಚ್ಚಿನ ಬಲ ನೀಡಿದರೆ ಸಮಗ್ರ ಅಭಿವೃದ್ಧಿ ಸಾಧ್ಯವಾಗಲಿದೆ ಎಂದರು.

ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಸಹಕಾರಿ ಸಂಸ್ಥೆಗಳು ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಮೂಲಕ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿವೆ ಎಂದರು.

ಡಿ.ಸಿ.ಸಿ.ಬ್ಯಾಂಕ್ ಮಾಜಿ ಅಧ್ಯಕ್ಷ ಜಗದೀಶಪ್ಪ ಬಣಕಾರ್ ಮಾತನಾಡಿ, ಸಹಕಾರ ಸಂಘಗಳ



ಯೋಜನೆಗಳು ಹಲವು ವರ್ಷಗಳ ಹಿಂದಿನಿಂದಲೂ ಇವೆ. ಈ ಯೋಜನೆಯಿಂದ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದು ಕೃಷಿ ಚಟುವಟಿಕೆಗಳಿಗೆ, ವ್ಯಾಪಾರಿಗಳಿಗೆ ಹಾಗೂ ಹೈನುಗಾರಿಕೆ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿರಿಗೆರೆ ರಾಜಣ್ಣ ಮಾತನಾಡಿ, 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು ಎನ್ನುವ ಮುಖ್ಯ ಧ್ಯೇಯದೊಂದಿಗೆ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಿಸಲಾಗುತ್ತಿದೆ ಎಂದರು.

ಮಹಿಳೆಯರು, ಯುವಜನರು ಮತ್ತು ಅಬಲ ವರ್ಗಕ್ಕೆ ಸಹಕಾರ ಸಂಸ್ಥೆಗಳು ಎನ್ನುವ ವಿಷಯ ಕುರಿತು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಬಿ.ರಾಮಚಂದ್ರಪ್ಪ ಉಪನ್ಯಾಸ ನೀಡಿದರು.

ಈ ವೇಳೆ ಶಿಮೂಲ್ ವಿಸ್ತರಣಾಧಿಕಾರಿ ಮಂಜುನಾಥ, ಡಿ.ಸಿ.ಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ. ಹಾಲೇಶಪ್ಪ, ಡಿ.ಎನ್ ಮಹೇಶ್ವರಪ್ಪ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿ.ಆನಂದಪ್ಪ, ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಹಾಲಿವಾಣ ಎಸ್.ಜಿ ಪರಮೇಶ್ವರಪ್ಪ, ಎನ್. ಕುಮಾರ್, ಎಸ್.ಮಂಜುಳ, ಹೆಚ್.ಸುನಿತಾ, ಎ. ಕೆ.ಸುರೇಶ್, ಎಂ.ಸಿ.ಆನಂದಸ್ವಾಮಿ, ಮಠದ ಮಹಾದೇವಪ್ಪ, ಸಾರಥಿ ಕುಮಾರ್, ಬನ್ನಿಕೋಡು ಲೋಕೇಶ್ ಮತ್ತು ಇತರರು ಉಪಸ್ಥಿತರಿದ್ದರು.

# ಸಮ್ಮೇಳನವು ಪತ್ರಕರ್ತರ ಶ್ರೇಯೋಭಿವೃದ್ಧಿಗೆ ಪೂರಕವಾಗಲಿ



### ಹಿರಿಯ ಶಾಸಕ ಎಸ್ಸೆಸ್ ಆಶಯ

ದಾವಣಗೆರೆ, ನ. 19- ಬರುವ ಜನವರಿಯಲ್ಲಿ ನಗರದಲ್ಲಿ ಆಯೋಜನೆಗೊಂಡಿರುವ 38ನೇ ಪತ್ರಕರ್ತರ ರಾಜ್ಯ ಸಮ್ಮೇಳನವು ಸಮಸ್ತ ಪತ್ರಕರ್ತರ ಶ್ರೇಯೋಭಿವೃದ್ಧಿಗೆ ಪೂರಕವಾಗಿರಲಿ ಎಂದು ಮಾಜಿ ಸಚಿವರೂ ಆದ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಶುಭ ಹಾರೈಸಿದರು.

ಸ್ಥಳೀಯ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ 'ಶಿವ-ಪಾರ್ವತಿ' ನಿವಾಸದ ಗೃಹ ಕಛೇರಿಯಲ್ಲಿ ಇಂದು ಸಂಜೆ ಪತ್ರಕರ್ತರ ಸಮ್ಮೇಳನದ ಲಾಂಛನವನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ರಾಜ್ಯ ಪತ್ರಕರ್ತರ ಸಮ್ಮೇಳನದ ಮಹಾ ಪೋಷಕರೂ ಆಗಿರುವ ಎಸ್ಸೆಸ್, ಕಳೆದ 31 ವರ್ಷಗಳ ಹಿಂದೆ ನಗರದ ಧರ್ಮಪ್ರಕಾಶ ರಾಜನಹಳ್ಳಿ ಹನುಮಂತಪ್ಪ ಧರ್ಮಶಾಲೆಯಲ್ಲಿ ನಡೆದಿದ್ದ ರಾಜ್ಯ ಪತ್ರಕರ್ತರ ಸಮ್ಮೇಳನದ ಸ್ವಾಗತ ಸಮಿತಿಗೆ ತಾವೇ ಅಧ್ಯಕ್ಷರಾಗಿ ಯಶಸ್ವಿಗೊಳಿಸಿದ್ದನ್ನು ಮೆಲುಕು ಹಾಕಿದರು.

ಇದೀಗ ನಡೆಯುತ್ತಿರುವ ಪತ್ರಕರ್ತರ ರಾಜ್ಯ ಸಮ್ಮೇಳನವು ಪತ್ರಕರ್ತರ ಹಲವಾರು ಬೇಡಿಕೆಗಳ ಕುರಿತಂತೆ ನಿರ್ಣಯಗಳನ್ನು ಕೈಗೊಂಡು ಸರ್ಕಾರದ ಮುಂದಿಟ್ಟು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಸಮಸ್ತ ಮಾಧ್ಯಮ ಮಿತ್ರರು ಒಗ್ಗಟ್ಟು ಪ್ರದರ್ಶಿಸಬೇಕು. ಈ ದಿಸೆಯಲ್ಲಿ ಎಲ್ಲರೂ ಸೇರಿ ಸಮ್ಮೇಳವನ್ನು ಯಶಸ್ವಿಗೊಳಿಸೋಣ ಎಂದು ಎಸ್ಸೆಸ್ ಹಾರೈಸಿದರು.

ಹಿರಿಯ ಪತ್ರಕರ್ತ-ಸಾಹಿತಿಯೂ ಆಗಿರುವ ಪತ್ರಕರ್ತರ ಸಮ್ಮೇಳನದ ಸ್ಮರಣ ಸಂಚಿಕೆ ಕಾರ್ಯನಿರ್ವಾಹಕ ಸಂಪಾದಕ ಬಿ.ಎನ್. ಮಲ್ಲೇಶ್ ಮಾತನಾಡಿ, ಹಿಂದೆ ನಡೆದಿದ್ದ ಸಮ್ಮೇಳನದ ಬಗ್ಗೆ ಎಸ್ಸೆಸ್ ಅವರ ಗಮನ ಸೆಳೆದರಲ್ಲದೇ, ಈಗ ನಡೆಯುತ್ತಿರುವ ಸಮ್ಮೇಳನದ ಕುರಿತಂತೆ ಮಾಹಿತಿ ನೀಡಿದರು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷರೂ ಆಗಿರುವ ರಾಜ್ಯ ಪತ್ರಕರ್ತರ ಸಮ್ಮೇಳನದ ಸಂಚಾಲಕ ಕೆ. ಏಕಾಂತಪ್ಪ ಮಾತನಾಡಿ, ಹಿಂದೆ ನಡೆದಿದ್ದ ಪತ್ರಕರ್ತರ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ಸಂಖ್ಯೆ ಕೇವಲ ಸಾವಿರದಲ್ಲಿತ್ತು. ಈಗ ನಡೆಯುತ್ತಿರುವ ಸಮ್ಮೇಳನದಲ್ಲಿ ಸುಮಾರು 6 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ - ಸಾಹಿತಿಯೂ ಆದ ಪತ್ರಕರ್ತರ ಸಮ್ಮೇಳನದ ಸ್ಮರಣ ಸಂಚಿಕೆ ಸಂಪಾದಕ ಮಂಡಳಿ ಸದಸ್ಯ ಬಾ.ಮ. ಬಸವರಾಜಯ್ಯ ಮಾತನಾಡಿ, ಪತ್ರಕರ್ತರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳು ಮತ್ತು ಪತ್ರಿಕೋದ್ಯಮದ ಮುಂದಿರುವ ಸವಾಲುಗಳ ಕುರಿತಂತೆ ಸಮ್ಮೇಳನದಲ್ಲಿ ಅನೇಕ ಗೋಷ್ಠಿಗಳು ನಡೆಯಲಿವೆ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘದ ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ. ಒಡೆಯರ್ ಅವರುಗಳು ಎಸ್ಸೆಸ್ ಅವರನ್ನು ಗೌರವಿಸಿದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ಫಕ್ರುದ್ದೀನ್ ಅವರಿಂದ ಸ್ವಾಗತ, ಖಜಾಂಚಿ ಎನ್.ವಿ. ಬದರಿನಾಥ್ ಅವರಿಂದ ವಂದನಾರ್ಪಣೆ, ನಿರ್ದೇಶಕ ಸಿ. ವೇದಮೂರ್ತಿ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

ಸಂಘದ ಜಿಲ್ಲಾ ಉಪಾಧ್ಯಕ್ಷ ಹೆಚ್.ಎನ್. ಪ್ರಕಾಶ್, ಕಾರ್ಯದರ್ಶಿ ಜೆ.ಎಸ್. ವೀರೇಶ್, ಪತ್ರಕರ್ತ ಕೆ. ಜೈಮುನಿ, ಛಾಯಾಗ್ರಾಹಕ ಯು.ಜಿ. ಮೊಹಮ್ಮದ್ ರಫೀಕ್ ಮತ್ತಿತರರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

## 15ನೇ ವಾರ್ಡಿನ ವಿನೋಬನಗರದಲ್ಲಿ ಒಳಚರಂಡಿ ಕಾಮಗಾರಿಗೆ ಭೂಮಿ ಪೂಜೆ



ದಾವಣಗೆರೆ, ನ. 19- ವಿನೋಬನಗರ 15ನೇ ವಾರ್ಡಿನ ನಾಲ್ಕನೇ ಮುಖ್ಯರಸ್ತೆ ಎರಡನೇ ಅಡ್ಡರಸ್ತೆಯಲ್ಲಿ 15ನೇ ಹಣಕಾಸು ಅಡಿಯಲ್ಲಿ 85 ಲಕ್ಷ ರೂ.ಗಳ ಒಳಚರಂಡಿ ಮತ್ತು ಕವರಿಂಗ್ ಸ್ಲಾಬ್ ಅಳವಡಿಸುವ ಸಲುವಾಗಿ ಏರ್ಪಡಿಸಿದ್ದ ಭೂಮಿ ಪೂಜೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೆರವೇರಿಸಿದರು.

ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಸಚಿವರು, ಮಹಾನಗರ ಪಾಲಿಕೆ ಸದಸ್ಯರು ಉತ್ತಮ ಕೆಲಸ, ಕಾರ್ಯಗಳನ್ನು ನೆರವೇರಿಸಲಿ ಎಂದು ತಿಳಿಸುತ್ತಾ, ಕಾರ್ಪೊರೇಟರ್‌ಗಳ ಜೊತೆ ನಾವಿರುತ್ತೇವೆ ಎಂದು ಕಿವಿಮಾತು ಹೇಳಿದರು

ಸಚಿವರೊಂದಿಗೆ ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರಾದ ಉಮೇಶ್, ಹೊನ್ನರಾಜು, ದಿನೇಶ್, 15ನೇ ವಾರ್ಡಿನ ಅಧ್ಯಕ್ಷ ವಿನಾಯಕ, ರವಿ,ರಘು, ಜಾಧವ್, ಸಮಾಜ ಸೇವಕ ಕೆ.ಎಂ. ವೀರಯ್ಯ ಮತ್ತು ಇತರರು ಉಪಸ್ಥಿತರಿದ್ದರು.

## ಸಚಿವರ ಇಂದಿನ ಪ್ರವಾಸ ಮುಂದೂಡಿಕೆ

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಇಂದು ಕೈಗೊಂಡಿದ್ದ ಜಗಳೂರು ಪ್ರವಾಸವನ್ನು ನಾಳೆ ದಿನಾಂಕ 21 ಕ್ಕೆ ಮುಂದೂಡಲಾಗಿದೆ.


**ಶೃತಿ ಅವರಿಗೆ ಗೌರವ ಡಾಕ್ಟರೇಟ್**


**ಶೃತಿ ಇನಾಮ್ದಾರ್** ಇವರಿಗೆ ವಿಶ್ವ ಮಾನವ ಹಕ್ಕುಗಳ ರಕ್ಷಣಾ ಆಯೋಗವು **ಗೌರವ ಡಾಕ್ಟರೇಟ್** ನೀಡಿ ಗೌರವಿಸಿದೆ. ಶೃತಿ ಇನಾಮ್ದಾರ್‌ರವರ ಸಂಶೋಧನೆ, ಬೋಧನೆ ಹಾಗೂ ಶೈಕ್ಷಣಿಕ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ನೊಂದಿಗೆ ವಿಶ್ವ ಮಾನವ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯತ್ವವನ್ನು ನೀಡಿ ಗೌರವಿಸಿದೆ.

**ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.**



ಶೃತಿ ಇನಾಮ್ದಾರ್


## ಯಲವಟ್ಟಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಶಿವಪ್ಪ



ಮಲೇಬೆನ್ನೂರು, ನ.19- ಯಲವಟ್ಟಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಡಿ. ಹೆಚ್. ಶಿವಪ್ಪ ಅವರು ಭಾನುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯ ಶ್ರೀಮತಿ ಶೃತಿ ಅವರು ಚುನಾವಣಾಧಿಕಾರಿಯಾಗಿದ್ದರು.

ಸಂಘದ ಉಪಾಧ್ಯಕ್ಷ ಕೆ. ಕರೀಶ್, ನಿರ್ದೇಶಕರಾದ ಡಿ.ಹೆಚ್. ಶಿವಾನಂದಪ್ಪ, ಡಿ.ಜಿ. ನಾಗರಾಜಪ್ಪ, ಎಸ್.ಪಿ. ರಾಮನಾಯ್ಕ, ಬಿ. ಬಸವರಾಜಪ್ಪ, ಹೆಚ್.ಸಿ. ಬಸವರಾಜಪ್ಪ, ಕೆ. ತಿರುಕಪ್ಪ, ಹೆಚ್.ಟಿ. ರುದ್ರಪ್ಪ, ಹೆಚ್.ಎಂ. ಪೂರ್ಣಿಮಾ, ಬಿ.ಜಿ. ಸುಶೀಲಮ್ಮ, ಕೆ. ರೇಣುಕಮ್ಮ, ಕಮಲಮ್ಮ, ಸಂಘದ ಕಾರ್ಯದರ್ಶಿ ಜಿ.ಎನ್. ಉಮೇಶ್ ಈ ವೇಳೆ ಹಾಜರಿದ್ದು ಅವಿರೋಧ ಆಯ್ಕೆ ಮಾಡಿದರು.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ ಹಾಗೂ ಇ.ಎಸ್.ಐ .ಆಸ್ಪತ್ರೆ ಕೆ.ಟಿ.ಜೆ ನಗರ ಪೊಲೀಸ್ ಠಾಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


ನಿಮ್ಮ ಆರೋಗ್ಯಕ್ಕಾಗಿ ನಮ್ಮ ಕಾಳಜಿಯ ಕೊಡುಗೆ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

**50%** ರಿಯಾಯಿತಿ ಹೊರ ರೋಗಿಗಳ ಸಮಾಲೋಚನೆ

- ಕ್ಯಾನ್ಸರ್ ಚಿಕಿತ್ಸೆ (ಕೀಮೋಥೆರಪಿ ಇತ್ಯಾದಿ)
- ಕ್ಯಾನ್ಸರ್ ಶಸ್ತ್ರಚಿಕಿತ್ಸೆ
- ಮೆಡಿಕಲ್ ಗ್ಯಾಸ್ಟ್ರೋಎಂಟರಾಲಜಿ
- ನರಶಾಸ್ತ್ರ
- ಸಂಧಿವಾತ
- ಲ್ಯಾಪರೊಸ್ಕೋಪಿಕ್ ಸರ್ಜರಿ
- ಮೂಳೆ ಶಸ್ತ್ರಚಿಕಿತ್ಸೆ
- ಚರ್ಮ ಹಾಗೂ ಸೌಂದರ್ಯ ಶಸ್ತ್ರ
- ಜನರಲ್ ಮೆಡಿಸಿನ್
- ವಿಕಿರಣಶಾಸ್ತ್ರ

**10%** ರಿಯಾಯಿತಿ
- ಔಷಧಿಗಳ ಮೇಲೆ
- ಒಳರೋಗಿ ದಾಖಲಾತಿಗಳ ಮೇಲೆ

**20%** ರಿಯಾಯಿತಿ
- ಅಲ್ಟ್ರಾಸೌಂಡ್ ಸ್ಕ್ಯಾನ್ (USG)
- ಸಿಟಿ ಸ್ಕ್ಯಾನ್
- ಎಂಡೋಸ್ಕೋಪಿ (ರೋಗನಿರ್ಣಯ ಮತ್ತು ಚಿಕಿತ್ಸೆ)
- ಬಯಾಪ್ಸಿ

**25%** ರಿಯಾಯಿತಿ
- ರಕ್ತ ಹಾಗೂ ಇತರೆ ಪರೀಕ್ಷೆಗಳು

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ, ಕೊಡುಗೆ ಸೀಮಿತ ಅವಧಿಗೆ ಮಾನ್ಯವಾಗಿರುತ್ತದೆ*

ಮಾಗನೂರು ಬಸಪ್ಪ ರಸ್ತೆ (ಹದಡಿ ರಸ್ತೆ), ದಾವಣಗೆರೆ | 08192-260111/7022260111



ssims SPARSH CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 23ನೇ ನವೆಂಬರ್ 2023 | ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


## ಮೇವು ಶೇಖರಣೆಗೆ ಡಿಸಿ ಕರೆ

ದಾವಣಗೆರೆ, ನ. 19 - ಈ ವರ್ಷ ಮಳೆ ಕೊರತೆಯಿಂದ ದಾವಣಗೆರೆ ಜಿಲ್ಲೆಯ 6 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗುವ ಸಾಧ್ಯತೆಗಳಿದ್ದು ಭತ್ತ, ಮೆಕ್ಕೆಜೋಳ ಮತ್ತು ಇತರೆ ಬೆಳೆಗಳ ಕಟಾವು ಮಾಡುವ ವೇಳೆ ಮೇವು ಹಾಳಾಗದಂತೆ ಶೇಖರಣೆ ಮಾಡಿಟ್ಟುಕೊಳ್ಳಲು ಜಿಲ್ಲೆಯಲ್ಲಿ ಕ್ರಮವಹಿಸುವಂತೆ ರೈತರಿಗೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್. ಎಂ.ವಿ ಮನವಿ ಮಾಡಿದ್ದಾರೆ.

ವಾಡಿಕೆ ಮಳೆಗಿಂತ ತೀವ್ರತರ ಕಡಿಮೆ ಮಳೆ ಯಾಗಿ ಬರ ಉಂಟಾಗಿದೆ. ಈ ಸಂಕಷ್ಟ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವು ಒದಗಿಸುವುದು ಪ್ರಮುಖ ವಿಷಯವಾಗಿದೆ. ರೈತರು ತಮ್ಮ ಜಮೀನಿನಲ್ಲಿರುವ ಯಾವುದೇ ತರಹದ ಮೇವನ್ನು ಸುಟ್ಟು ಹಾಕದೇ ಬಣವೆ ಹಾಕಿ ಶೇಖರಿಸಬೇಕು. ಮೇವನ್ನು ಒಣಗಿಸಿ ಹುಲ್ಲು ಹಾಳಾಗದಂತೆ ಶೇಖರಣೆ ಮಾಡುವುದು. ಬೇಲಿಂಗ್ ಯಂತ್ರಗಳಿಂದ ಭತ್ತದ ಹುಲ್ಲು ಸುರುಳಿ ಕಟ್ಟಿ ಶೇಖರಿಸಿಟ್ಟುಕೊಳ್ಳಬೇಕು. ಅವಶ್ಯಕ ಸಂದರ್ಭದಲ್ಲಿ ರೈತರು ಸರ್ಕಾರಕ್ಕೆ ಮೇವನ್ನು ಮಾರಾಟ ಮಾಡಬಹುದು ಎಂದು ಅವರು ತಿಳಿಸಿದ್ದಾರೆ.

## ಅಣಬೆ, ಮೋಟಾರ್ ರಿವೈಂಡಿಂಗ್ ತರಬೇತಿ

ದಾವಣಗೆರೆ, ನ. 19 - ತೋಳಹುಣಸೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಹಳೇ ತೋಳಹುಣಸೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ಅಭ್ಯರ್ಥಿಗಳಿಗಾಗಿ ಉಚಿತ ಊಟ ಮತ್ತು ವಸತಿಯೊಂದಿಗೆ ಅಣಬೆ ಬೇಸಾಯ ತರಬೇತಿ, ವಿದ್ಯುತ್ ಪಂಪ್‌ಸೆಟ್ ಮತ್ತು ಮೋಟಾರ್ ರಿವೈಂಡಿಂಗ್ ತರಬೇತಿ ಹಮ್ಮಿಕೊಳ್ಳಲಾಗಿದೆ. 30 ದಿನಗಳ ಈ ತರಬೇತಿಗೆ 24.11.23ರಂದು ಸಂದರ್ಶನ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 7019980484, 9483386143, 99641 11314, 95383 95817,94819 77076.

## ಮೋನಿಕಾರಿಂದ ಶಾಮನೂರು ಶಾಲೆಯ ಮಕ್ಕಳಿಗೆ ಸಮವಸ್ತ್ರ ವಿತರಣೆ





ದಾವಣಗೆರೆ, ನ. 19- ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ಹುಟ್ಟುಹಬ್ಬದಂದು ಮೊನ್ನೆ ಶಾಮನೂರು ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಮನೂರಿನ ಕಲ್ಲಳ್ಳಿ ರುದ್ರೇಶ್ ಅವರ ಪುತ್ರಿ ಕು. ಕೆ.ಆರ್. ಮೋನಿಕಾ ಅವರು ಶಾಲೆಯ ಎಲ್ಲಾ ಮಕ್ಕಳಿಗೆ ಸಮವಸ್ತ್ರಗಳನ್ನು ವಿತರಿಸಿದರು. ಕಲ್ಲಳ್ಳಿ ರುದ್ರೇಶ್ ಅವರನ್ನು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ದವನ್ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್, ನಗರ ಪಾಲಿಕೆ ಸದಸ್ಯ ಕಲ್ಲಳ್ಳಿ ನಾಗರಾಜ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಕಣ್ಣಾಳ ಅಂಜಿನಪ್ಪ, ಎಂ. ರಾಜಪ್ಪ, ಶಾಲೆಯ ಶಿಕ್ಷಕಿಯರು, ಸಿಬ್ಬಂದಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


SPARSH HOSPITAL THE TOUCH OF LIFE




**ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್**

ಹೃದಯ ವೈಫಲ್ಯ ಕ್ಲಿನಿಕ್
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು
ಸಮಾಲೋಚನೆಗಾಗಿ ದಾವಣಗೆರೆಗೆ ಭೇಟಿ ನೀಡಲಿದ್ದಾರೆ

**ಡಾ|| ಪಿ ಅಶೋಕ್ ಕುಮಾರ್**

MBBS, MD, DM, FSCAI Interventional Cardiology,
Advanced Heart Failure Management & Transplant Cardiology

**Consultant Cardiologist**

ಈ ಕೆಳಕಂಡ ತೊಂದರೆಗಳಿಗೆ ಸಲಹೆ ನೀಡಲಾಗುವುದು

ಹೃದಯ ಲಯದ ತೊಂದರೆಗಳು (Arrhythmias) | ನೀವು ಜನಿಸುವಾಗ ಕಂಡು ಬಂದ ಹೃದಯ ದೋಷಗಳು (Congenital Heart Defects) ಹೃದಯ ಕವಾಟದ ಕಾಯಿಲೆ | ಹೃದಯ ಸ್ನಾಯುವಿನ ಕಾಯಿಲೆ | ಹೃದಯದ ಸೋಂಕು | ಎದೆ ನೋವು, ಎದೆಯ ಬಿಗಿತ, ಎದೆಯ ಒತ್ತಡ ಮತ್ತು ಎದೆಯ ಅಸ್ವಸ್ಥತೆ (Angina) | ಆಯಾಸ | ಒತ್ತಡ | ಪಾದದ ಊತ | ಉಸಿರಾಟ ತೊಂದರೆ

ನೋಂದಣಿಗಾಗಿ ಕರೆಮಾಡಿ: **97316 41986 | 99800 33277**

ಸೂಚನೆ: ವೈದ್ಯರು ಪ್ರತೀ ತಿಂಗಳ ಎರಡನೇ ಬುಧವಾರ ತಪಾಸಣೆಗೆ ಲಭ್ಯರಿರುತ್ತಾರೆ

ದಿನಾಂಕ: ಬುಧವಾರ, 22ನೇ ನವೆಂಬರ್ 2023 | ಸಮಯ: ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 1:00 ರವರೆಗೆ

ಸ್ಥಳ: ಸಿಟಿ ಸೆಂಟ್ರಲ್ ಆಸ್ಪತ್ರೆ

ಅಕ್ಕಮಹಾದೇವಿ ರಸ್ತೆ, 17, AVK ಕಾಲೇಜು ರಸ್ತೆ, ಪಿ ಜೆ ಎಕ್ಸಟೆನ್ಶನ್, ದಾವಣಗೆರೆ – 577 002